ಸಂಪುಟ : 8 ಸಂಚಿಕೆ : 186 ಪುಟ : 4 ಬೆಲೆ : 3.00 ರವಿವಾರ ಆಗಸ್ಟ್ 27, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 186 Pages : 4 Price : 3.00 Sunday August 27, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

### ಕರ್ನಾಟಕ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರ ಸಮ್ಮೇಳನದಲ್ಲಿ ಸಚಿವ ಎಚ್.ಕೆ ಪಾಟೀಲ

# ಸರ್ಕಾರಿ ವ್ಯಾಜ್ಯಗಳ ನಿರ್ವಹಣಾ ಅಧಿನಿಯಮ ಜಾರಿಗೆ



■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ ಅಧಿನಿಯಮ-2023ನ್ನು ವಿಧಾನ ಮಂಡಲದ ಕಳೆದ ಅಧಿವೇಶನದಲ್ಲಿ ಅಂಗೀಕರಿಸಲಾಗಿದ್ದು, ಸರ್ಕಾರಿ ವ್ಯಾಜ್ಯ ನಿರ್ವಹಣೆ ಇತ್ತೀಚಿನ ದಿನಗಳಲ್ಲಿ ದಿಕ್ಸೂಚಿ ಅಥವಾ ನಿರ್ದೇಶನ ರಹಿತ ರೀತಿಯಲ್ಲಿ ನಡೆಯುತ್ತಿತ್ತು. ಕೇವಲ ಸುತ್ತೋಲೆಗಳು, ಸರ್ಕಾರಿ ಆದೇಶಗಳು, ನಿಯಮಗಳು ಪರಿಣಾಮರಹಿತವಾಗಿ ಕಾರ್ಯನಿರ್ವಹಿಸುತ್ತಿದ್ದವು. ಆದರೆ ಕರ್ನಾಟಕ ವಿಧಾನ ಮಂಡಲದಲ್ಲಿ ಸರ್ಕಾರಿ ವ್ಯಾಜ್ಯಗಳ ನಿರ್ವಹಣಾ ಅಧಿನಿಯಮವನ್ನು ಜಾರಿಗೆ ತಂದು ಸರ್ಕಾರಿ ವಕೀಲರ ಕಾರ್ಯನಿರ್ವಹಣೆಯನ್ನು ರಾಷ್ಟ್ರದಲ್ಲಿಯೇ ಪ್ರಪ್ರಥಮ ಬಾರಿಗೆ ಕ್ರೋಢೀಕರಿಸಲಾಗಿದೆ ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ ತಿಳಿಸಿದರು.

ಶುಕ್ರವಾರ ವಿಧಾನಸೌಧದ 3ನೇ ಮಹಡಿಯ ಸಮ್ಮೇಳನ ಸಭಾಂಗಣದಲ್ಲಿ ನಡೆದ ಕರ್ನಾಟಕ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರುಗಳ ಸಮ್ಮೇಳನದಲ್ಲಿ ಮಾತನಾಡಿದ ಸಚಿವರು, ಇದರಿಂದ ಸರ್ಕಾರದ ವ್ಯಾಜ್ಯಗಳನ್ನು ಪರಿಣಾಮಕಾರಿಯಾಗಿ, ಜನಹಿತ ಮತ್ತು ಸರ್ಕಾರದ ಹಿತಾಸಕ್ತಿಯನ್ನು ಅತ್ಯುನ್ನತವೆಂದು ಭಾವಿಸಿ, ಪುನರ್‌ವ್ಯಾಖ್ಯಾನ ಮಾಡಿ,



ಹೊಣೆಗಾರಿಕೆ ಮತ್ತು ಜವಬ್ದಾರಿಗಳನ್ನು ಜಾರಿಗೆ ತಂದಿದೆ ಎಂದರು.

ರಾಜ್ಯದ ಜಿಲ್ಲಾ, ತಾಲ್ಲೂಕು ಮತ್ತು ಇತರ ನ್ಯಾಯಾಲಯಗಳಲ್ಲಿ ಹೈಕೋರ್ಟ್‌ವರೆಗೆ ಪ್ರಸ್ತುತ 21.4 ಲಕ್ಷ ಪ್ರಕರಣಗಳು ವಿಚಾರಣೆಯ ಹಂತದಲ್ಲಿವೆ. ಕೆಳ ಹಂತದ ನ್ಯಾಯಾಲಯದಲ್ಲಿ 18.9 ಲಕ್ಷ ಪ್ರಕರಣಗಳಿದ್ದರೆ, 2.50 ಲಕ್ಷ ಪ್ರಕರಣಗಳು ಹೈಕೋರ್ಟ್‌ನಲ್ಲಿವೆ.

> ಕಳೆದ ಐದಾರು ವರ್ಷಗಳಲ್ಲಿ ಕರ್ನಾಟಕ ಸರ್ಕಾರ ಮತ್ತು ಇತರ ಸರ್ಕಾರಿ ಸಂಸ್ಥೆಗಳು ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಶೇ.75ರಷ್ಟು ಪ್ರಕರಣಗಳನ್ನು ಸೋತಿವೆ ಅಥವಾ ಸರ್ಕಾರದ ವಿರುದ್ಧ ಆದೇಶಗಳಾಗಿವೆ. ಕ್ರಿಮಿನಲ್ ಪ್ರಕರಣಗಳಲ್ಲಿ ಶೇ.95ಕ್ಕಿಂತಲೂ ಹೆಚ್ಚು ಪ್ರಕರಣಗಳಲ್ಲಿ ಕರ್ನಾಟಕ ಸರ್ಕಾರ ಸೋಲು ಅನುಭವಿಸಿದೆ. ತಪ್ಪಿತಸ್ಥರಿಗೆ ಶಿಕ್ಷೆ ಆಗಿಲ್ಲ. ಸರ್ಕಾರಿ ಮೇಲ್ಮನವಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿ, ವೆಚ್ಚದಾಯಕ ವ್ಯವಸ್ಥೆಯನ್ನು ರೂಪಿಸಿದೆ.
>
> – ಎಚ್.ಕೆ ಪಾಟೀಲ.
>
> ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು.

ಆರ್ಬಿಟ್ರೇಷನ್ ಪ್ರಕರಣಗಳಲ್ಲಿ ಹಲವಾರು ರೀತಿಯ ಲೋಪಗಳು, ವ್ಯತ್ಯಯಗಳಾಗುತ್ತಿರುವುದರಿಂದ ಅವುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಮತ್ತು ಸರ್ಕಾರಿ ವಕೀಲರು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಕಾಲಕ್ಕೆ ಸಲ್ಲಿಸುವಂತೆ ಸರ್ಕಾರ ಎಲ್ಲ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದರು. ಆರ್ಬಿಟ್ರೇಷನ್ ಪ್ರಕರಣಗಳಲ್ಲಿ ಸರ್ಕಾರದ ಉನ್ನತ ಅಧಿಕಾರಿಗಳು ಮತ್ತು ಇತರ ಸಂಬಂಧಪಟ್ಟವರೊಂದಿಗೆ ಮುಂದಿನ 15 ದಿನಗಳಲ್ಲಿ ಚರ್ಚಿಸಿ ಮಾರ್ಗದರ್ಶಿ ಸೂತ್ರಗಳನ್ನು ನಿರ್ಣಯಿಸಲಾಗುವುದೆಂದು ಸಚಿವರು ವಿವರಿಸಿದರು.

1626 ಪ್ರಕರಣಗಳು 20ರಿಂದ 30 ವರ್ಷದ ಹಳೆಯವಾಗಿದ್ದರೆ, 30 ವರ್ಷಕ್ಕಿಂತ ಹೆಚ್ಚು ಹಳೆಯದಾದ ಪ್ರಕರಣಗಳು 172 ▸▸3 ನೇ ಪುಟಕ್ಕೆ

### ಪೋಕ್ಸೋ ಕಾಯ್ದೆ, ಮಕ್ಕಳ ಕಾನೂನು ಸಾಕ್ಷರತಾ ಕಾರ್ಯಕ್ರಮದಲ್ಲಿ –ನ್ಯಾ. ಕೆ.ಗುರುಪ್ರಸಾದ

## ಪೋಕ್ಸೋ ಕಾಯ್ದೆಯ ಗಂಭೀರತೆಯ ಅರಿವಿರಲಿ

■ವಿಜಯಸಾಕ್ಷಿ ಸುದ್ದಿ, ಗದಗ

ಲೈಂಗಿಕ ಉದ್ದೇಶದಿಂದ ಮಗುವಿನ ಖಾಸಗಿ ಅಂಗಾಂಗ ಮುಟ್ಟುವುದು ಲೈಂಗಿಕ ದೌರ್ಜನ್ಯವಾಗಿದೆ. ಮುಟ್ಟದೇ ಚುಡಾಯಿಸುವುದು, ಮೊಬೈಲ್‌ನಲ್ಲಿ ಕೆಟ್ಟದಾದ ಸಂದೇಶ ಕಳಿಸುವುದು ಕೂಡ ಅಪರಾಧವಾಗಿದ್ದು, ಇದಕ್ಕೆ ಕೂಡ ಶಿಕ್ಷೆ ವಿಧಿಸಬಹುದಾಗಿದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ನುಡಿದರು.



ಅವರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ವಕೀಲರ ಸಂಘ, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಇಲಾಖೆ, ಆರೋಗ್ಯ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ ಇವುಗಳ ಸಂಯುಕ್ತಾಶ್ರಯದಲ್ಲಿ ಗದಗ ನಗರದ ಸರ್ಕಾರಿ ಉರ್ದು ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಪೋಕ್ಸೊ ಕಾಯ್ದೆ ಹಾಗೂ ಮಕ್ಕಳ ಕಾನೂನುಗಳ ಕುರಿತು ಕಾನೂನು ಸಾಕ್ಷರತಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್ ಬುರುಡಿ ಮಾತನಾಡಿ, ಲೈಂಗಿಕ ದೌರ್ಜನ್ಯದಂತಹ ಪ್ರಕರಣಗಳು ಕಂಡುಬಂದಲ್ಲಿ, ಯಾವುದೇ ಹಿಂಜರಿಕೆ ಇಲ್ಲದೇ ಮಕ್ಕಳ ಸಹಾಯವಾಣಿ 1098ಗೆ ಕರೆ ಮಾಡಿ ಅಥವಾ 112ಗೆ ಕರೆ ಮಾಡಿ ವಿಷಯ ತಿಳಿಸಬೇಕು ಎಂದು ಹೇಳಿದರು.

> ಮಕ್ಕಳ ಮೇಲೆ ಲೈಂಗಿಕ ಅತ್ಯಾಚಾರ ಅಥವಾ ಲೈಂಗಿಕ ದೌರ್ಜನ್ಯ ಎಸಗಿದರೆ ಕನಿಷ್ಠ 20 ವರ್ಷಗಳವರೆಗೆ ಶಿಕ್ಷೆ ಹಾಗೂ ಗರಿಷ್ಠ ಆಜೀವಪರ್ಯಂತ ಸೆರೆವಾಸ ಶಿಕ್ಷೆಯನ್ನು ವಿಧಿಸುವಷ್ಟು ಪೋಕ್ಸೊ ಕಾಯ್ದೆ ಗಂಭೀರವಾಗಿದೆ. ಬಾಲ್ಯವಿವಾಹವೂ ಸಹ ಶಿಕ್ಷಾರ್ಹ ಅಪರಾಧವಾಗಿದೆ. ಪ್ರೌಢಶಾಲೆ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಪೋಕ್ಸೊ ಕಾಯ್ದೆಯ ಗಾಂಭೀರ್ಯವನ್ನು ಅರಿಯದೇ ಸಮಸ್ಯೆಗೀಡಾಗುವುದು ಕಂಡುಬಂದಿದ್ದರಿಂದ ಶಾಲಾ-ಕಾಲೇಜುಗಳಲ್ಲಿ ಪೋಕ್ಸೋ ಕಾಯ್ದೆಯ ಕುರಿತು ಹಾಗೂ ಮಕ್ಕಳ ಕಾನೂನುಗಳ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಂಡಿದೆ.
>
> – ಕೆ. ಗುರುಪ್ರಸಾದ.
>
> ಹಿರಿಯ ದಿವಾಣಿ ನ್ಯಾಯಾಧೀಶರು, ಜಿಲ್ಲಾ ಕಾ.ಸೇ.ಪ್ರಾ ಸದಸ್ಯ ಕಾರ್ಯದರ್ಶಿ.

ಎಸ್‌ಡಿಎಂಸಿ ಅಧ್ಯಕ್ಷ ಅಕ್ಬರಸಾಬ ಬಬರ್ಚಿ ಮಾತನಾಡಿ, ಮಕ್ಕಳಿಗೆ ಇರುವ ಕಾನೂನುಗಳನ್ನು ಅರಿಯುವ ಪಾಲಕ ▸▸3 ನೇ ಪುಟಕ್ಕೆ

### ಲಯನ್ಸ್ ಕ್ಲಬ್ ಪ್ರಯತ್ನಕ್ಕೆ ಉತ್ತಮ ಸ್ಪಂದನೆ

## 20 ದಿನಗಳಲ್ಲಿ ಐವರಿಂದ ನೇತ್ರದಾನ



■ವಿಜಯಸಾಕ್ಷಿ ಸುದ್ದಿ, ಗದಗ

ನೇತ್ರದಾನದ ಕುರಿತು ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಕೈಗೊಂಡಿರುವ ಜನಜಾಗೃತಿ ಅಭಿಯಾನಕ್ಕೆ ಪ್ರಜ್ಞಾವಂತರಿಂದ ಉತ್ತಮ ಸ್ಪಂದನೆ ದೊರೆಯುತ್ತಿದೆ.

ಕಳೆದ 20 ದಿನಗಳಲ್ಲಿ ಐದು ಜನರಿಂದ ನೇತ್ರದಾನ ನಡೆದಿದೆ. ಕ್ರಮೇಣವಾಗಿ ಜನಸಮುದಾಯದಲ್ಲಿ ಈ ಕುರಿತು ಅರಿವು ಮೂಡುತ್ತಿದೆ. ಮೃತ ವ್ಯಕ್ತಿಯ ನೇತ್ರದಾನದ ಬಗ್ಗೆ ನೋಂದಣಿ ಮಾಡದಿದ್ದರೂ ಸಹ ಕುಟುಂಬದವರ ಸಮ್ಮತಿ ಪಡೆದು ನೇತ್ರದಾನ ಮಾಡಬಹುದಾಗಿದೆ.

ಸಾವಿನ ನಂತರ ಕಣ್ಣುಗಳು ಶವದೊಂದಿಗೆ ಮಣ್ಣಾಗದಂತೆ ಅಥವಾ ಬೆಂಕಿಯಲ್ಲಿ ಭಸ್ಮವಾಗದಂತೆ ಮುಂಜಾಗ್ರತೆ ವಹಿಸಬೇಕು. ಸಾವಿನ ಬಳಿಕ 2-4 ಗಂಟೆಯೊಳಗೆ ನೇತ್ರದಾನ ಮಾಡಬೇಕು ಎಂದು ಗದಗ-ಬೆಟಗೇರಿ ಲಾಯನ್ಸ್ ಕ್ಲಬ್ ಸಭೆ-ಸಮಾರಂಭದ ಮೂಲಕ ಜನಜಾಗೃತಿ ಮೂಡಿಸುತ್ತ ಬಂದಿದೆ. ಸಾಮಾಜಿಕ ▸▸3 ನೇ ಪುಟಕ್ಕೆ

## ಗದಗ ಜಿಲ್ಲೆಗೆ ಇಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್

■ವಿಜಯಸಾಕ್ಷಿ ಸುದ್ದಿ, ಗದಗ




ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರಾದ ದಿನೇಶ್ ಗುಂಡೂರಾವ ಅವರು ಆ.27 ರಂದು ಗದಗ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ. ಆ.27 ರಂದು ಹುಬ್ಬಳ್ಳಿಯಿಂದ ರಸ್ತೆಯ ಮೂಲಕ ಮಧ್ಯಾಹ್ನ 12 ಗಂಟೆಗೆ ಗದುಗಿಗೆ ಆಗಮಿಸಿ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಜರುಗಲಿರುವ ಆಯ್.ಎಂ.ಎ. ಸಿ.ಜಿ.ಪಿ.ಸೌತ್ ಝೋನ ಕಾನ್ಫರೆನ್ಸ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು. ತದನಂತರ ಮಧ್ಯಾಹ್ನ 1.30 ಗಂಟೆಗೆ ರಸ್ತೆಯ ಮೂಲಕ ಹಿರಿಯೂರಿಗೆ ಪ್ರಯಾಣ ಬೆಳೆಸುವರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

## ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರ ಜಿಲ್ಲಾ ಪ್ರವಾಸ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಆ.27 ರಂದು ಮುಂಜಾನೆ 6 ಗಂಟೆಗೆ ಬೆಂಗಳೂರಿನಿಂದ ಹುಬ್ಬಳ್ಳಿಗೆ ರೈಲಿನ ಮೂಲಕ ಆಗಮಿಸುವರು.

ಮುಂಜಾನೆ 9 ಗಂಟೆಗೆ ಕಲ್ಲೂರ ಗ್ರಾಮದಲ್ಲಿ ಮೈಲಾರಲಿಂಗೇಶ್ವರ ದೇವಸ್ಥಾನ ಹಾಗೂ ಸಮುದಾಯ ಭವನಗಳ ಉದ್ಘಾಟನೆ ನೆರವೇರಿಸಿ, ವಾಲ್ಮೀಕಿ ಸಮುದಾಯ ಭವನದ ಭೂಮಿ ಪೂಜೆ ನೆರವೇರಿಸುವರು. ಮಧ್ಯಾಹ್ನ 12 ಗಂಟೆಗೆ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಜರುಗಲಿರುವ ಆಯ್.ಎಂ.ಎ. ಸಿ.ಜಿ.ಪಿ.ಸೌತ್ ಝೋನ ಕಾನ್ಫರೆನ್ಸನಲ್ಲಿ ಭಾಗವಹಿಸುವರು.




ರಾತ್ರಿ 8 ಗಂಟೆಗೆ ನರಗುಂಪತ್ತ ಪತ್ರಿವನ ಮಠದ ಶ್ರೀ ಗುರುಶಂಭುಲಿಂಗೇಶ್ವರ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ಗದುಗಿನಲ್ಲಿ ವಾಸ್ತವ್ಯ ಮಾಡುವರು.

ಆ.28 ರಂದು ಮುಂಜಾನೆ 10 ಗಂಟೆಗೆ ನಗರದ ಕನಕಭವನದಲ್ಲಿ ಆಯೋಜಿಸಲಾಗಿರುವ ದೇವರಾಜ ಅರಸು ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಸಾಯಂಕಾಲ 5 ಗಂಟೆಗೆ ನಗರದ ಕಾಟನ ಸೇಲ್ ಸೊಸೈಯಟಿಯಲ್ಲಿ ಸಾರ್ವಜನಿಕರ ಭೇಟಿ ನಡೆಸಿ ಗದುಗಿನಲ್ಲಿ ವಾಸ್ತವ್ಯ ಮಾಡುವರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

## ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲರ ಜಿಲ್ಲಾ ಪ್ರವಾಸ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ



ರಾಜ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಸಚಿವರಾದ ಶರಣಪ್ರಕಾಶ ಪಾಟೀಲ ಅವರು ಆ.26 ರಂದು ಚಿತ್ರದುರ್ಗದಿಂದ ರಸ್ತೆಯ ಮೂಲಕ ರಾತ್ರಿ 8.30 ಗಂಟೆಗೆ ಗದಗಿಗೆ ಆಗಮಿಸಿ ವಾಸ್ತವ್ಯ ಮಾಡುವರು. ಆ.27 ಭಾನುವಾರದಂದು ಮುಂಜಾನೆ 9 ಗಂಟೆಗೆ ಗದಗ ವಿಜ್ಞಾನಗಳ ಸಂಸ್ಥೆಗೆ ಭೇಟಿ ನೀಡುವರು. ಮುಂಜಾನೆ 10.30 ಗಂಟೆಗೆ ಆಯ್.ಎಂ.ಎ. ಸಿ.ಜಿ.ಪಿ.ಸೌತ್ ಝೋನ ಕಾನ್ಫರೆನ್ಸನಲ್ಲಿ ಭಾಗವಹಿಸುವರು. ಮಧ್ಯಾಹ್ನ 2.30 ಗಂಟೆಗೆ ರಸ್ತೆಯ ಮೂಲಕ ಹುಬ್ಬಳ್ಳಿಗೆ ಪ್ರಯಾಣ ಬೆಳೆಸುವರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

## ಬಸವದಳದ ವಾರ್ಷಿಕ ಮಹಾಸಭೆ ಇಂದು



■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ರವಿವಾರ ಬೆಳಿಗ್ಗೆ 11ಕ್ಕೆ ನಡೆಯಲಿರುವ ಬಸವದಳದ 1556ನೇ ಶರಣ ಸಂಗಮದಲ್ಲಿ ಬಸವದಳದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಹಾಗೂ 'ಖ್ಯಾತ ಸಂಶೋಧಕ ಡಾ. ಎಂ.ಎಂ ಕಲಬುರ್ಗಿಯವರ ಸ್ಮರಣೆ' ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಅಧ್ಯಕ್ಷತೆಯನ್ನು ಬಸವದಳದ ಅಧ್ಯಕ್ಷ ಶರಣ ವಿ.ಕೆ ಕರೇಗೌಡ್ರ ವಹಿಸುವರು. ಸೂಜಿ ಮುಟ್ಟದ ಸರದಾರ ಶರಣ ಡಾ. ಕೆ.ಯೋಗೇಶನ್, ಆಯುರ್ವೇದ ತಜ್ಞರು ಗದಗ ಇವರು ಉಪನ್ಯಾಸ ಮಾಡುವರು. ಅತಿಥಿಗಳಾಗಿ ಕೆವಿಜಿಬಿ ಗೋಕಾಕದ ಪ್ರಾದೇಶಿಕ ಪ್ರಬಂಧಕ ಶರಣ ಸಂತೋಷ ಎನ್.ನರಗುಂದ ಆಗಮಿಸುವರು. ಬಸವದಳದ ಸದಸ್ಯರು, ಶರಣ ಸಾಹಿತ್ಯಾಭಿಮಾನಿಗಳು ಹಾಗೂ ಆಸಕ್ತರು ಭಾಗವಹಿಸಬೇಕೆಂದು ಸಂಘಟಕರ ಪರವಾಗಿ ಪ್ರಕಾಶ ಅಸುಂಡಿಯವರು ವಿನಂತಿಸಿದ್ದಾರೆ.

## 'ಜನಪದ ಸಾಹಿತ್ಯ' ಬದುಕಿನ ಮೂಲಮಂತ್ರ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

'ಜನಪದ' ಕನ್ನಡ ಸಾಹಿತ್ಯದ ಮೇರು ಶಿಖರ ಮತ್ತು ಸಾಹಿತ್ಯದ ಮೂಲಮಂತ್ರವೆಂದರೆ ತಪ್ಪಾಗಲಾರದು ಎಂದು ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ ಹೇಳಿದರು.

ಅವರು ಪಟ್ಟಣದ ಅಕ್ಕಮಹಾದೇವಿ ದೇವಸ್ಥಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಶ್ರಾವಣ ಸಂಜೆ ಕಾರ್ಯಕ್ರಮದಲ್ಲಿ ಮಾತನಾಡಿ, ಜನಪದ ಸಾಹಿತ್ಯ ಬದುಕಿನ ಮೂಲಮಂತ್ರವೇ ಆಗಿದೆ. ಮನೆಯೇ ಮೊದಲ ಪಾಠಶಾಲೆ-ತಾಯಿಯೇ ಮೊದಲ ಗುರು ಎನ್ನುವಂತೆ ತಾಯಿ ತನ್ನ ಮಗು ತೊಟ್ಟಿಲಲ್ಲಿದ್ದಾಗಲೇ ಸೋಬಾನೆ, ಲಾಲಿ ಹಾಡುಗಳ ಮೂಲಕ ಮೌಲ್ಯಗಳನ್ನು ತಿಳಿಸುತ್ತಾಳೆ. ಜಾನಪದ ಶೈಲಿಯ ಬೀಸುವ, ಕುಟ್ಟುವ, ಒಕ್ಕಲಿ ಮಾಡುವ, ಮಗಳನ್ನು ಗಂಡನ ಮನೆಗೆ ಕಳುಹಿಸುವಾಗ, ಮಕ್ಕಳಿಗೆ ಹೆಸರಿಡುವಾಗ, ಮದುವೆ ಸಮಾರಂಭ, ಜಾತ್ರೆ, ಹಬ್ಬ-ಹರಿದಿನ ಸೇರಿ ಜೀವನದ ಪ್ರತಿ ಹಂತದಲ್ಲೂ ಜಾನಪದ ಹಾಡು, ಸಾಹಿತ್ಯದ ಮೂಲಕ ಬದುಕಿನ ಮೌಲ್ಯಗಳನ್ನು ಸಾರಿ ಹೇಳಲಾಗುತ್ತದೆ. ವೇದ, ಪುರಾಣ, ಪುಣ್ಯಕಥೆಗಳಲ್ಲಿನ ಸ್ವಾರಸ್ಯವನ್ನು ಜಾನಪದ ಒಳಗೊಂಡಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶರಣ ಸಾಹಿತ್ಯ ಪರಿಷತ್ತಿನ ತಾಲೂಕಾಧ್ಯಕ್ಷ ▸▸3ನೇ ಪುಟಕ್ಕೆ

## ಅಧಿಕ ಇಳುವರಿ, ಹೆಚ್ಚಿನ ಆದಾಯ ನೀಡುವ ವೆಂಗುರ್ಲಾ-4 ಗೋಡಂಬಿ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಶಿರಹಟ್ಟಿ-ಲಕ್ಷ್ಮೇಶ್ವರ ತಾಲೂಕುಗಳು ಅರೆಮಲೆನಾಡು ಪ್ರದೇಶದಿಂದ ಕೂಡಿದ್ದು, ಈ ಪ್ರದೇಶಕ್ಕೆ ಸೂಕ್ತವಾಗಿ ಹೊಂದಿ, ಅಧಿಕ ಇಳುವರಿ, ಹೆಚ್ಚಿನ ಆದಾಯ ನೀಡುವ ಗೋಡಂಬಿ ತಳಿ ವೆಂಗುರ್ಲಾ-4 ಆಗಿದೆ. ಈ ತಳಿ ರೈತರ ಆರ್ಥಿಕ ಸುಧಾರಣೆಗೆ ಸಹಕಾರಿಯಾಗಲಿದೆ. ಆಸಕ್ತ ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಸುರೇಶ ಕುಂಬಾರ ರೈತರಲ್ಲಿ ಮನವಿ ಮಾಡಿದ್ದಾರೆ.



ವೆಂಗುರ್ಲಾ-4 ಶಿರಹಟ್ಟಿ-ಲಕ್ಷ್ಮೇಶ್ವರ ತಾಲೂಕುಗಳಿಗೆ ಅತೀ ಸೂಕ್ತವಾಗಿದ್ದು, ಕೆಂಪು ಮಣ್ಣಿನಿಂದ ಕೂಡಿದ ಭೂಮಿ ಇದಕ್ಕೆ ಅನುಕೂಲಕರವಾಗಿದೆ. ಅತೀ ಹೆಚ್ಚಿನ ಪ್ರದೇಶ ವಿಸ್ತರಣೆ ಮಾಡಲು ಅವಕಾಶ ಮತ್ತು ಅನುಕೂಲತೆಗಳಿವೆ. ಈಗಾಗಲೇ ಸಾಕಷ್ಟು ರೈತರು ಈ ತಳಿಯ ಗೋಡಂಬಿ ಗಿಡಗಳನ್ನು ಬೆಳೆಸಿದ್ದು, ಅಧಿಕ ಇಳುವರಿ ಜೊತೆಗೆ ಹೆಚ್ಚಿನ ಆದಾಯ ಪಡೆಯುತ್ತಿದ್ದಾರೆ. ಪ್ರಸಕ್ತ ಸಾಲಿಗೆ ರೈತರಿಗೆ ಬೆಳೆ ಬೆಳೆಯಲು ಕೊಚ್ಚಿಯ ಗೇರು ಹಾಗೂ ಕೋಕೋ ನಿರ್ದೇಶನಾಲಯದ ಪ್ರಾಯೋಜಕತ್ವದಲ್ಲಿ ಉಚಿತ ಕಸಿ ಗಿಡಗಳು ಹಾಗೂ ನಿರ್ವಹಣೆಗಾಗಿ ಸಹಾಯಧನ ನೀಡಲಾಗುತ್ತಿದೆ.

ಉಚಿತ ಸಸಿ ಹಾಗೂ ಸಹಾಯಧನ ಪಡೆಯಲು ಇಚ್ಛಿಸುವ ರೈತರು ನಿಗದಿತ ನಮೂನೆಯಲ್ಲಿ ಪಹಣಿ ಪತ್ರಿಕೆ, ಆಧಾರ್‌ಕಾರ್ಡ್, ಪಾಸ್‌ಪೋರ್ಟ್ ಅಳತೆಯ ಫೋಟೋ, ಬ್ಯಾಂಕ್ ಪುಸ್ತಕ, ಮಣ್ಣು ಮತ್ತು ನೀರಿನ ಪರೀಕ್ಷಾ ವರದಿಯೊಂದಿಗೆ ಕಚೇರಿಗೆ ಸೆ.7ರೊಳಗಾಗಿ ಅರ್ಜಿ ಸಲ್ಲಿಸಿ ಅನುಕೂಲ ಪಡೆಯಬಹುದು. ಗದಗ ತಾಲೂಕಿನ ಹುಲಕೋಟಿಯಲ್ಲಿ ಗೋಡಂಬಿ ಸಂಸ್ಕರಣಾ ಘಟಕ ಪ್ರಾರಂಭವಾಗುತ್ತಿದ್ದು, ಇದರ ಸದುಪಯೋಗವನ್ನು ರೈತರು ಪಡೆದುಕೊಳ್ಳಬೇಕೆಂದು ಅವರು ತಿಳಿಸಿದ್ದಾರೆ.

## ಸಾಕ್ಷಿ ಸುಭಾಷಿತ

ಧ್ಯಾನ, ಪರಿಶುದ್ಧ ಬದುಕು ಮತ್ತು ಶಾಂತ ಚಿತ್ತ ನಿನ್ನ ಕೆಲಸದಲ್ಲಿ ನೈಪುಣ್ಯತೆಯನ್ನು ತಂದುಕೊಡುತ್ತದೆ.

–ಬುದ್ಧ

## ಸಂಪಾದಕೀಯ

# ಪ್ರಧಾನಿ ಭೇಟಿ ಮತ್ತು ರಾಜಕಾರಣ

ಚಂದ್ರಯಾನ 3 ಯಶಸ್ವಿಗೊಳಿಸಿದ ವಿಜ್ಞಾನಿಗಳನ್ನು ಅಭಿನಂದಿಸಲು ಇವತ್ತು ಖುದ್ದು ಪ್ರಧಾನಿ ನರೇಂದ್ರ ಮೋದಿ ಬೆಂಗಳೂರಿಗೆ ಆಗಮಿಸಿದ್ದರು. ಶಿಷ್ಟಾಚಾರ ಪಾಲನೆಯಾಗದಿದ್ದರೂ ಪ್ರಧಾನಿ ಭೇಟಿ ಯಶಸ್ವಿಯಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತ್ರವಲ್ಲದೆ ಮಾತೃಪಕ್ಷ ಬಿಜೆಪಿಯ ನಾಯಕರು ದೂರವಿಟ್ಟು, ಕೇವಲ ವಿಜ್ಞಾನಿಗಳನ್ನು ಭೇಟಿ ಮಾಡಿ ಅವರನ್ನು ಅಭಿನಂದಿಸಿ, ಚಂದ್ರಯಾನದ ಉಡ್ಡಯನದ ಪ್ರತಿಯೊಂದು ಕಾರ್ಯವನ್ನು ಸವಿವರವಾಗಿ ತಿಳಿದುಕೊಂಡರು.

ಪ್ರಧಾನಿ ನರೇಂದ್ರ ಮೋದಿ ಭೇಟಿಯ ವಿಷಯ ಈಗ ರಾಜಕೀಯ ಚರ್ಚೆಯಾಗಿ ಬದಲಾಗಿದೆ. ಶಿಷ್ಟಾಚಾರದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಧಾನಿಯನ್ನು ಸ್ವಾಗತಿಸಲಿಲ್ಲ ಎಂದು ಬಿಜೆಪಿ ನಾಯಕರು ಆರೋಪಿಸುತ್ತಿದ್ದರೆ, ಪ್ರಧಾನಿ ಭೇಟಿಗೆ ಬಿಜೆಪಿ ನಾಯಕರು ರಸ್ತೆಯಲ್ಲಿ ನಿಲ್ಲುವಂತಾಗಿದೆ ಎಂದು ಲೇವಡಿ ಮಾಡುತ್ತಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸ್ವಾಗತಕ್ಕೆ ಆಗಮಿಸಿದಂತೆ ಪ್ರಧಾನಿ ನರೇಂದ್ರ ಮೋದಿ ನಿರಾಕರಣೆ ಮಾಡಿದ ಹಿನ್ನೆಲೆಯಲ್ಲಿ ಅವರು ವಿಮಾನ ನಿಲ್ದಾಣಕ್ಕೆ ಹೋಗಿರಲಿಲ್ಲ. ಖುದ್ದು ಪ್ರಧಾನಿಯೇ ಈ ವಿಷಯವನ್ನು ತಿಳಿಸಿದ್ದರೂ ಬಿಜೆಪಿ ನಾಯಕರು ಟೀಕೆ ಮಾಡುತ್ತಿದ್ದಾರೆ.

ಇನ್ನು ಬಿಜೆಪಿ ನಾಯಕರ ಟೀಕೆಗೆ ಕಾಂಗ್ರೆಸ್ ನಾಯಕರು ಪ್ರತಿಯಾಗಿ ಟೀಕೆ ಮಾಡುತ್ತಿದ್ದಾರೆ. ಒಟ್ಟಾರೆ ಪ್ರಧಾನಿ ನರೇಂದ್ರ ಮೋದಿ ಭೇಟಿ ವಿಷಯ ರಾಜಕೀಯ ಚರ್ಚೆಗೆ ಗ್ರಾಸವಾಗಿರುವುದು ಆಶ್ಚರ್ಯ ಮೂಡಿಸಿದೆ.

ಕರ್ನಾಟಕ ಮೌಲ್ಯಯುತ ರಾಜಕಾರಣಕ್ಕೆ ಹೆಸರಾದ ರಾಜ್ಯ. ಕರ್ನಾಟಕದ ರಾಜಕಾರಣಿ ಇನ್ನಿತರ ರಾಜ್ಯದ ರಾಜಕಾರಣಿಗಳಿಗಿಂತ ಭಿನ್ನ ಎನ್ನುವ ಮಾತಿತ್ತು. ಆದರೆ ಅದೆಲ್ಲಾ ಈಗ ಸುಳ್ಳು ಎನ್ನುವಂತಾಗಿದೆ.

ಪ್ರಧಾನಿ ಭೇಟಿಯ ಒಂದು ಸಣ್ಣ ವಿಷಯವನ್ನ ಮುಂದಿಟ್ಟುಕೊಂಡು ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರು ಮಾಡಿದ ಆರೋಪ ಪ್ರತ್ಯಾರೋಪ ಅಸಹ್ಯ ಮೂಡಿಸುವಂತಾಗಿದೆ. ತಮ್ಮದು ಬಡವರ ಪಕ್ಷ ಎಂದು ಹೇಳಿಕೊಳ್ಳುವ ಕಾಂಗ್ರೆಸ್, ದೇಶ ಮೊದಲು ಎನ್ನುವ ಬಿಜೆಪಿ ನಾಯಕರು ಅವೆರಡನ್ನು ಮರೆತು ಸಣ್ಣ ಮಕ್ಕಳಂತೆ ಸಾಮಾಜಿಕ ಜಾಲತಾಣವನ್ನು ಬಳಸಿಕೊಂಡು ಟೀಕಾಪ್ರಹಾರದಲ್ಲಿ ಕಾಲಹರಣ ಮಾಡುತ್ತಿದ್ದಾರೆ. ದೊಡ್ಡ ದೊಡ್ಡ ನಾಯಕರೆ ಇಂಥ ಟೀಕೆಗೆ ಮುಂದಾದರೆ ಯುವ ರಾಜಕಾರಣಿಗಳ ಕಥೆ ಏನು? ರಾಜಕಾರಣ ಎಂದರೆ ಟೀಕೆ ಮಾಡುವುದಷ್ಟೆ ಅಲ್ಲ ಅಂತ ಇವರಿಗೆ ಅರ್ಥ ಮಾಡವುವರಾರು?

# ಸೋನಿಯಾ ಗಾಂಧಿ ದೋಣಿ ವಿಹಾರ

■ವಿಜಯಸಾಕ್ಷಿ ಸುದ್ದಿ, ನವದೆಹಲಿ

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಶನಿವಾರ ಶ್ರೀನಗರಕ್ಕೆ ತೆರಳಿದ್ದು, ನೈಜೀನ್ ಸರೋವರದಲ್ಲಿ ದೋಣಿ ವಿಹಾರ ಮಾಡಿದ್ದಾರೆ.

ಜಮ್ಮು-ಕಾಶ್ಮೀರ ಮತ್ತು ಲಡಾಖ್‌ನಲ್ಲಿರುವ ಕಾಂಗ್ರೆಸ್ ಪಕ್ಷದ ನಾಯಕ, ವಯನಾಡ್ ಸಂಸದ ರಾಹುಲ್ ಗಾಂಧಿ ಅವರು ಕಾಶ್ಮೀರಕ್ಕೆ ಬಂದಿಳಿದಿದ್ದು ಅವರನ್ನು ಸೋನಿಯಾ ಗಾಂಧಿ ಭೇಟಿ ಮಾಡಲಿದ್ದಾರೆ.

ಒಂದು ವಾರದ ಹಿಂದೆ ಲಡಾಖ್ ಪ್ರವಾಸ ಕೈಗೊಂಡಿದ್ದ ರಾಹುಲ್ ಗಾಂಧಿ, ಲೇಹ್‌ನ ಪ್ಯಾಂಗಾಂಗ್ ಸರೋವರದ ಬಳಿ ತಮ್ಮ ತಂದೆ ರಾಜೀವ್ ಗಾಂಧಿ ಅವರ ಜನ್ಮದಿನದ ಅಂಗವಾಗಿ ಅವರಿಗೆ ಗೌರವ ನಮನ ಸಲ್ಲಿಸಿದ್ದರು.

ಇದೀಗ ರಾಹುಲ್ ಕಾಶ್ಮೀರಕ್ಕೆ ಆಗಮಿಸಿದ್ದು, ಅಲ್ಲೇ ಎರಡು ದಿನ ಇರಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಜಮ್ಮು ಮತ್ತು ಕಾಶ್ಮೀರ ಅವರ ಮನೆ, ಇಲ್ಲಿನ ಜನರನ್ನು ಮತ್ತು ಈ ನೆಲವನ್ನು ಅವರು ಪ್ರೀತಿಸುತ್ತಾರೆ, ಆದ್ದರಿಂದ ಅವರು ಇಲ್ಲಿ ಎರಡು ದಿನಗಳನ್ನು ಶಾಂತಿಯಿಂದ ಕಳೆಯಲು ಬಯಸುತ್ತಾರೆ. ಇದು ರಾಜಕೀಯ ಭೇಟಿಯಲ್ಲ, ಇದು ಸಂಪೂರ್ಣ ವೈಯಕ್ತಿಕ ಮತ್ತು ಖಾಸಗಿ ಭೇಟಿ ಎಂದು ಜಮ್ಮು ಮತ್ತು ಕಾಶ್ಮೀರ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ವಿಕಾರ್ ರಸೂಲ್ ವಾನಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ರಾಹುಲ್ ಜಿ ಅವರು ಈಗಾಗಲೇ ಶ್ರೀನಗರಕ್ಕೆ ಆಗಮಿಸಿದ್ದಾರೆ. ವಯನಾಡ್ ಸಂಸದರನ್ನು ಶನಿವಾರ ಅವರ ತಾಯಿ ಸೇರಲಿದ್ದಾರೆ ಎಂದು ಮಾಧ್ಯಮ ಹೇಳಿಕೆಯಲ್ಲಿ ಶ್ರೀನಗರದ ಹಿರಿಯ ಕಾಂಗ್ರೆಸ್ ನಾಯಕರೊಬ್ಬರು ತಿಳಿಸಿದ್ದಾರೆ.

# ಎನ್‌ಸಿಪಿ ಬಿಟ್ಟವರ ವಿರುದ್ಧ ಗೆರಿಲ್ಲಾ ಯುದ್ಧತಂತ್ರ



■ವಿಜಯಸಾಕ್ಷಿ ಸುದ್ದಿ, ಮುಂಬೈ

ಪಕ್ಷ ಬಿಟ್ಟವರ ವಿರುದ್ಧ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಗೆರಿಲ್ಲಾ ಯುದ್ಧತಂತ್ರವನ್ನು ಅನುಸರಿಸುತ್ತಿದ್ದಾರೆ ಎಂದು ಶಿವಸೇನಾದ (ಯುಟಿಬಿ) ವಕ್ತಾರ ಸಂಜಯ್ ರಾವುತ್ ಹೇಳಿದ್ದಾರೆ.

ಮುಂಬೈನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ನಮ್ಮ ಪಕ್ಷವೂ ರಣರಂಗದಲ್ಲಿ ಬಿಜೆಪಿ ವಿರುದ್ಧ ಹೋರಾಟ ಮಾಡುತ್ತಿದೆ" ಎಂದಿದ್ದಾರೆ.

"ಪಕ್ಷ ಬಿಟ್ಟವರ ವಿರುದ್ಧ ಶರದ್ ಪವಾರ್ ಹಾಗೂ ಅವರ ಸಂಗಡಿಗರು ಗೆರಿಲ್ಲಾ ಯುದ್ಧತಂತ್ರವನ್ನು ಅನುಸರಿಸುತ್ತಿದ್ದಾರೆ. ಶರದ್ ಪವಾರ್ ಯಾವತ್ತೂ ಬಿಜೆಪಿ ಜತೆ ಕೈ ಜೋಡಿಸುವುದಿಲ್ಲ. ಅವರು ಮಹಾ ವಿಕಾಸ್ ಅಘಾಡಿ ಹಾಗೂ ಖಔಆಖಂ ಮೈತ್ರಿಕೂಟದ ಪ್ರಮುಖ ನಾಯಕರು, ಅವರು ಎರಡು ಕಲ್ಲಿನ ಮೇಲೆ ಕಾಲಿಟ್ಟಿಲ್ಲ. ಶರದ್ ಪವಾರ್ ಬಗ್ಗೆ ಯಾರಿಗೂ ಅನುಮಾನ ಇಲ್ಲ" ಎಂದು ರಾವುತ್ ಹೇಳಿದ್ದಾರೆ.

ಶಿವಸೇನೆ ಹಾಗೂ ಎನ್‌ಸಿಪಿ ಎರಡೂ ಪಕ್ಷಗಳು ಒಡೆದುಹೋಗಿದ್ದರಿಂದ ನಷ್ಟವಾಗಿದೆ ಎನ್ನುವ ವಾದವನ್ನು ಸಂಜಯ್ ರಾವುತ್ ಅವರು ತಳ್ಳಿಹಾಕಿದ್ದಾರೆ.

ನಮ್ಮ ಪಕ್ಷ ವಿಭಜನೆಯಾಗಿಲ್ಲ: ಶರದ್ ಪವಾರ್

ಮತ್ತೊಂದೆಡೆ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಕೂಡ ತಮ್ಮ ಪಕ್ಷ ವಿಭಜನೆಯಾಗಿದೆ ಎನ್ನುವುದನ್ನು ನಿರಾಕರಿಸಿದ್ದಾರೆ. "ಕೆಲವು ಶಾಸಕರು ಬಿಟ್ಟು ಹೋಗಿದ್ದು ನಿಜವಷ್ಟೇ, ಶಾಸಕರೆಂದರೆ ಇಡೀ ರಾಜಕೀಯ ಪಕ್ಷ ಅಲ್ಲ" ಎಂದು ಅವರು ಹೇಳಿದ್ದಾರೆ.

ಈ ಬಗ್ಗೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, "ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿರುವ ಜಯಂತ್ ಪಾಟೀಲ್ ಅವರೇ ರಾಜ್ಯ ಘಟಕವನ್ನೂ ಮುನ್ನಡೆಸುತ್ತಿದ್ದಾರೆ. ಎನ್‌ಸಿಪಿಯಲ್ಲಿ ವಿಭಜನೆ ಉಂಟಾಗಿಲ್ಲ. ಕೆಲವು ಶಾಸಕರು ಪಕ್ಷ ಬಿಟ್ಟಿದ್ದಾರೆ ಎನ್ನುವುದು ನಿಜವಷ್ಟೇ.. ಆದರೆ ಶಾಸಕರೆಂದರೆ ಇಡೀ ರಾಜಕೀಯ ಪಕ್ಷ ಅಲ್ಲ, ಬಂಡಾಯಗಾರರ ಹೆಸರು ಹೇಳಿ ಅವರಿಗೆ ಯಾಕೆ ಪ್ರಾಮುಖ್ಯತೆ ಕೊಡಬೇಕು?" ಎಂದು ಪವಾರ್ ಅವರು ಪ್ರಶ್ನೆ ಮಾಡಿದ್ದಾರೆ.

## ಅನ್ನ, ಅಕ್ಷರ ದಾಸೋಹಕ್ಕೆ ಸಾಕ್ಷಿಯಾಗಿರುವ ಅನ್ನದಾನೇಶ್ವರ ಮಠ

# ಸರ್ವ ಜನಾಂಗದ ಭಕ್ತಿಯ ಶ್ರದ್ಧಾಕೇಂದ್ರ

ಯುಗಧರ್ಮ, ಸಾಕ್ಷಿಪ್ರಜ್ಞೆ, ಧಾರ್ಮಿಕ ಶಕ್ತಿ ಮತ್ತು ಇಷ್ಟಲಿಂಗಾನುಸಂಧಾನದ ಸೂತ್ರಗಳನ್ನು ಹೊಂದಿದ ಮಠಗಳು ಸಮಸ್ತ ಸಮಾಜದೊಂದಿಗೆ ನಿರಂತರವಾಗಿ ಮುಖಾಮುಖಿಯಾಗಿವೆ. ಪರಿಣಾಮವಾಗಿ, ಕನ್ನಡ ನಾಡಿನ ಧಾರ್ಮಿಕ ಪರಂಪರೆಯಲ್ಲಿ ತನ್ನದೇ ಆದ ಕಾರ್ಯಕ್ಷೇತ್ರದ ಮೂಲಕ ಅನೇಕ ಸಾಮಾಜಿಕ, ಧಾರ್ಮಿಕ ಕಾರ್ಯಗಳಿಂದ ಸಮಾಜ ಸೇವೆಯಲ್ಲಿ ಅವಿರತವಾಗಿ ಶ್ರಮಿಸುತ್ತಿರುವ ಗದಗ ಜಿಲ್ಲೆಯ ಗಜೇಂದ್ರಗಡ ತಾಲ್ಲೂಕಿನ ಹಾಲಕೆರೆಯ ಶ್ರೀ ಅನ್ನದಾನೇಶ್ವರ ಮಠವು ಈ ಭಾಗದ ಸರ್ವ ಜನಾಂಗದ ಭಕ್ತಿಯ ಶ್ರದ್ಧಾಕೇಂದ್ರವಾಗಿದೆ.

500 ವರ್ಷಗಳ ಭವ್ಯ ಆಧ್ಯಾತ್ಮಿಕ ಮತ್ತು ಅನುಭಾವಿಕ ಪರಂಪರೆಯನ್ನು ಹೊಂದಿದ ಮಠವು, 12ನೇ ಶತಮಾನದ ಅಲ್ಲಮ ಪ್ರಭುವಿನ ಶಿಷ್ಯರಿಂದ ಪ್ರವಹಿಸಿ ಬಂದಿದ್ದು, ಮಠದ ಇತಿಹಾಸದಲ್ಲಿ 9ನೇ ಗುರುಗಳಾದ ಲಿಂ. ಗಡ್ಡದಜ್ಜನವರು ಹಿಮಾಲಯದಲ್ಲಿ ತಪಸ್ಸನ್ನು ಆಚರಿಸಿದವರು. ಹಲವಾರು ಲೀಲೆಗಳನ್ನು ತೆ-ೂರಿ ಧರ್ಮದ ಉದಾರತೆಯನ್ನು ಮೆರೆದಿದ್ದ ಇಟಗಿಯ ಭೀಮವ್ವನಿಗೆ ಲಿಂಗದೀಕ್ಷೆಯನ್ನು ನೀಡಿದವರು. 10ನೇ ಗುರುಗಳಾದ ಲಿಂ. ಗುರು



ಅನ್ನದಾನ ಮಹಾಸ್ವಾಮಿಗಳು ಸರ್ವರಲ್ಲಿ ಆಧ್ಯಾತ್ಮ ಕೀರ್ತಿಯನ್ನು ಬೆಳಗಿಸಿ, 27 ಶಾಖಾಮಠಗಳಲ್ಲಿನ ಭಕ್ತ ಸಮೂಹದಲ್ಲಿ ಧಾರ್ಮಿಕ ಜಾಗೃತಿಗೈದು ಅಪಾರ ಸಂಖ್ಯೆಯಲ್ಲಿ ಭಕ್ತವೃಂದವನ್ನು ಸೃಷ್ಟಿಸಿದರು. ಶಿವಪೂಜಾ ನಿಷ್ಠರಾದ ಶಿವಶರಣೆ ಸಜ್ಜಲಗುಡ್ಡದ ಶರಣಮ್ಮನವರಿಗೆ ಲಿಂಗದೀಕ್ಷೆಯನ್ನು ನೀಡಿದರು. ಆದ್ದರಿಂದ ಈ ಮಠವನ್ನು ಬಾಗಲಕೋಟೆಯ ವೈರಾಗ್ಯ ಮಲ್ಲಣಾರ್ಯರು 'ಭಕ್ತಿಯ ಕಾಶಿ' ಎಂದು ಕರೆದಿದ್ದಾರೆ.

**ಸ್ವಾತಂತ್ರ್ಯ ಪೂರ್ವದಲ್ಲಿಯೇ ಅಕ್ಷರ ಜ್ಞಾನ:** ಹಾನಗಲ್ಲ ಕುಮಾರ ಮಹಾಸ್ವಾಮಿಗಳ ಅಪ್ಪಣೆಯ ಮೇರೆಗೆ ಸ್ವಾತಂತ್ರ್ಯ ಸಿಗುವುದಕ್ಕಿಂತ ಪೂರ್ವದಲ್ಲಿ ಈ ಭಾಗದಲ್ಲಿ ಶಿಕ್ಷಣದ ಕ್ರಾಂತಿಯನ್ನು ಮಾಡಿ ಅಕ್ಷರಜ್ಯೋತಿಯ ಬೆಳಕನ್ನು ದಯಪಾಲಿಸಲು ನರೇಗಲ್ಲ ಸಮೀಪದ ಕೋಡಿಕೊಪ್ಪದ ನಿರ್ಜನ ಪ್ರದೇಶದಲ್ಲಿ 3 ವರ್ಷಗಳ ಕಾಲ ಅನುಷ್ಠಾನಗೈದು ತಪಸ್ವಿಗಳೆನಿಸಿದರು. ಬಳಿಕ ವಿಜಯ ವಿದ್ಯಾಪ್ರಸಾರಕ ಸಮಿತಿಯನ್ನು ಸ್ಥಾಪಿಸಿ ಶಿಕ್ಷಣದ ಅಗತ್ಯಕ್ಕೆ ಸಕ್ರಿಯವಾಗಿ ಸ್ಪಂದಿಸಿ, ಜ್ಞಾನ ದಾಸೋಹದ ಮೂಲಕ ಅಸಂಖ್ಯಾತ ಬಡಮಕ್ಕಳಿಗೆ ಜ್ಞಾನದ ಬೆಳಕನ್ನು ನೀಡಿದರು.

ಈ ಹಿಂದಿನ ಡಾ. ಅಭಿನವ ಅನ್ನದಾನ ಮಹಾಸ್ವಾಮಿಗಳು, ನಾಗನೂರು ಶಿವಬಸವ ಮಹಾಸ್ವಾಮಿಗಳ ಅಪ್ಪಣೆ ಯಂತೆ 1987ರಲ್ಲಿ ಕೊಟ್ಟೂರುಸ್ವಾಮಿ ಸಂಸ್ಥಾನಮಠದ ಹೊಸಪೇಟೆಯ ಸಂಗನಬಸವ ಮಹಾಸ್ವಾಮಿಗಳು 12ನೇ ಪೀಠಾದಿಪತಿಗಳೆಂದು ನಾಮಾಂಕಿತರಾಗಿ ನೇಮಕಗೊಂಡರು. ಅನ್ನದಾನೇಶ್ವರರ ದೀಪ ಬೆಳಗುವದಕ್ಕೆ ತಾವೇ ತೈಲವಾದರು.

**ವೈವಿಧ್ಯತೆಯ ಕಾರ್ಯಕ್ರಮಗಳು:** ಭವ್ಯ ಬಸವ ಪುರಾಣ, 301 ಸಾಮೂಹಿಕ ವಿವಾಹ, ಶತಮಾನೋತ್ಸವ, ಸುವರ್ಣಮಹೋತ್ಸವ, ಬೆಳ್ಳಿ-ಬಂಗಾರದ ಹಬ್ಬ, ಮಹಿಳೆಯರಿಂದ ಬೆಳ್ಳಿ ರಥೋತ್ಸವ, 5001 ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ, 261 ಚಕ್ಕಡಿಗಳ ಮೂಲಕ ಪುಣ್ಯಕ್ಷೇತ್ರ ಉಳವಿಯವರೆಗೆ



ಪ್ರಯಾಣ, 5001 ಕೃಷಿ ಕಾರ್ಮಿಕ ತಾಯಂದಿರ ಸನ್ಮಾನ, ಜೈವಿಕ ಇಂಧನದ ತಿಳುವಳಿಕೆಗಾಗಿ ತಜ್ಞರ ಸಮಾವೇಶ, ಸಾವಯವ ಕೃಷಿಕರ ಸಮಾವೇಶ, ಸಾಧನೆಗೈದ ವಿದ್ಯಾರ್ಥಿಗಳ ಸನ್ಮಾನ ಹೀಗೆ ಹತ್ತು ಹಲವಾರು ವಿನೂತನ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಶ್ರೀಮಠದ ಆಧ್ಯಾತ್ಮ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

**ಶೈಕ್ಷಣಿಕ ಕ್ರಾಂತಿ:** ಶಿಕ್ಷಣದಿಂದಲೇ ಸಮಗ್ರ ಅಭಿವೃದ್ಧಿ ಎಂಬ ಮಂತ್ರವನ್ನು ನಂಬಿದ್ದ ಇವರು, ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಶಾಲಾ ಕಾಲೇಜುಗಳನ್ನು ಮುನ್ನಡೆಸುವುದರ ಮೂಲಕ ಆಧುನಿಕ ಶಿಕ್ಷಣದ ಸೌಲಭ್ಯವನ್ನು ನೀಡುತ್ತ, ಕಾಲಾನುಗುಣಕ್ಕೆ ತಕ್ಕಂತೆ ಪ್ರಾಥಮಿಕ, ಪ್ರೌಢ, ಪಿಯುಸಿ, ಪದವಿ ಹಾಗೂ ಉನ್ನತ ಶಿಕ್ಷಣದ ವಿಭಾಗಗಳನ್ನು ಸ್ಥಾಪಿಸಿ ಶ್ರೀಮಠದ ಶೈಕ್ಷಣಿಕ ಕೀರ್ತಿಯನ್ನು ಬೆಳೆಗಿಸುತ್ತಿದ್ದಾರೆ.

76ರ ಇಳಿ ವಯಸ್ಸಿನಲ್ಲಿ ಹಂಪಿ ವಿಶ್ವವಿದ್ಯಾಲಯದಿಂದ ಡಾಕ್ಟ-ರೇಟ್ ಪದವಿಯನ್ನು ಹೊಂದಿ, 27 ಶಾಖಾಮಠಗಳ ಅಧಿಕಾರ ಸ್ವೀಕರಿಸಿದ 27 ವರ್ಷಗಳಲ್ಲಿ ಆಮೂಲಾಗ್ರ ಬದಲಾವಣೆ ಮಾಡುವುದರ ಮೂಲಕ ಶ್ರೀ ಮಠದ ಇತಿಹಾಸವನ್ನು ಸುವರ್ಣಾಕ್ಷರಗಳಲ್ಲಿ ಬರೆಯಿಸಿದ ಕಾಯಕ ನಿಷ್ಠೆಯ ಕಾಯಕ ಯೋಗಿಗಳಾಗಿದ್ದಾರೆ.

ಪೂಜ್ಯ ಡಾ. ಅಭಿನವ ಅನ್ನದಾನ ಮಹಾಸ್ವಾಮಿಗಳವರು ಲಿಂಗೈಕ್ಯರಾಗಿ ಸರಿಸುಮಾರು ಒಂದೂವರೆ ವರ್ಷವಾಯಿತು. ಈಗಿನ ಪೀಠಾಧಿಪತಿಗಳಾಗಿರುವ ಜ. ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳವರು ತಮ್ಮ ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತ, ಎಲ್ಲ ವ್ಯವಸ್ಥೆಯನ್ನೂ ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಹೀಗಾಗಿ ಗುರುವಿಗೆ ತಕ್ಕ ಶಿಷ್ಯನೆಂಬ ಅಭಿದಾನಕ್ಕೆ ಪಾತ್ರರಾಗಿ ಶ್ರೀಮಠದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕಾರ್ಯಗಳಿಗೆ ಕಿಂಚಿತ್ತೂ ವಿಘ್ನ ಬಾರದಂತೆ ಮುನ್ನಡೆಸಿಕೊಂಡು ಹೋಗುತ್ತಿರುವುದು ಭಕ್ತರೆಲ್ಲರ ಸಂತೋಷಕ್ಕೆ ಕಾರಣವಾಗಿದೆ.

> ಈ ನಾಡಿನ ವೀರಶೈವ ಪರಂಪರೆಯಲ್ಲಿ ಹಲವಾರು ಮಠಮಾನ್ಯಗಳ ಸಾಮಾಜಿಕ ಸೇವೆ ಅನನ್ಯವಾದದ್ದು. ಅದರಂತೆ ಶ್ರೀ ಅನ್ನದಾನೇಶ್ವರ ಮಠ ಈ ಕ್ಷೇತ್ರದ ಅತ್ಯಂತ ಪುರಾತನ ಕಾಲದ ಪಾರಂಪರಿಕ ಮಠಗಳಲ್ಲಿ ಒಂದಾಗಿದೆ. ಆಧ್ಯಾತ್ಮಿಕ, ಧಾರ್ಮಿಕ ಹಾಗೂ ಅನ್ನ, ಅಕ್ಷರ ದಾಸೋಹಕ್ಕೆ ಕೈ ಮಾಡಿ ಕರೆಯುವ ಶ್ರೀಮಠ ಕಲೆ, ಸಾಹಿತ್ಯ, ಸಾಂಸ್ಕೃತಿಕವಾಗಿ ಜನಜಾಗೃತಿ ಮೂಡಿಸುವ ಅಗ್ರಪಂಕ್ತಿಯನ್ನು ಹೊಂದಿದೆ. ಡಾ. ಅಭಿನವ ಅನ್ನದಾನ ಮಹಾಸ್ವಾಮಿಗಳವರ ಕರ್ತೃತ್ವ ಶಕ್ತಿ ಎಲ್ಲೆಲ್ಲೂ ಎದ್ದು ಕಾಣುತ್ತಿದೆ. ಅವರ ಆಶೀರ್ವಾದದಿಂದ ಎಲ್ಲವೂ ಸುಸೂತ್ರವಾಗಿ ಮುನ್ನಡೆಯುತ್ತಿರುವುದು ನಮಗೆ ತುಂಬಾ ಆನಂದವನ್ನುಂಟು ಮಾಡಿದೆ.
>
> **– ಜ. ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು.**
> ಜ. ಅನ್ನದಾನೇಶ್ವರ ಸಂಸ್ಥಾನ ಮಠ ಹಾಲಕೆರೆ, ನರೇಗಲ್ಲ.

## ಇಂದು ಕಾಲೇಜಿನ 6ನೇ ವರ್ಷದ ಸಂಸ್ಥಾಪನಾ ದಿನದ ನಿಮಿತ್ತ ಲೇಖನ

# ಫಲಪ್ರದ ಯಶಸ್ಸಿನ ಷಟ್ಪಥದತ್ತ 'ಸನ್ಮಾರ್ಗ'

2017-18, ಆಗಸ್ಟ 27 ಗದಗ-ಬೆಟಗೇರಿಯ ಶೈಕ್ಷಣಿಕ ರಂಗದಲ್ಲಿ 'ನವಪಲ್ಲವ'ದ ಉದಯ. ಸಮಾನ ಮನಸ್ಕ ಪಂಚಸುಮನಗಳು ತಮ್ಮಲ್ಲಿದ್ದ ಜ್ಞಾನಪ್ರಭೆಯ ಪರಿಮಳವನ್ನು ವಿದ್ಯಾರ್ಥಿ ಸಮೂಹಕ್ಕೆ ಪಸರಿಸಿ, ಇಲ್ಲಿನ ಶೈಕ್ಷಣಿಕರಂಗ ಸುಗಂಧಭರಿತವಾಗಲಿ ಎಂಬ ಸದುದ್ದೇಶವೇ 'ಸ್ಟುಡೆಂಟ್ಸ್ ಎಜ್ಯುಕೇಶನ್ ಸೊಸೈಟಿಯ' ಅಡಿಯಲ್ಲಿ ಜನಿಸಿದ 'ಸನ್ಮಾರ್ಗ ಪದವಿಪೂರ್ವ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ'

ಅಂದು ಅಂಕುರಿಸಿದ ಈ ಪುಟ್ಟ ಸಸಿ ಕೇವಲ ಐದು ವರ್ಷಗಳಲ್ಲಿ ಎತ್ತರಕ್ಕೆ ಬೆಳೆದು ಶೈಕ್ಷಣಿಕವಾದ ಪುಷ್ಪಸಮೃದ್ಧಿಯೊಂದಿಗೆ ಫಲಭರಿತವಾಗುತ್ತಲೇ ಸಾಗಿ ಬಂದು ಜನಮಾನಸದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದಿದೆ. ಇದೇ ಕಾರಣಕ್ಕೆ ಕೇವಲ ಗದಗ-ಬೆಟಗೇರಿ ವ್ಯಾಪ್ತಿಯಲ್ಲಷ್ಟೇ ಅಲ್ಲದೆ, ಸುತ್ತಲಿನ ಹತ್ತಾರು ಪ್ರದೇಶಗಳ ಪಾಲಕ ಹಾಗೂ ವಿದ್ಯಾರ್ಥಿಗಳ




ಮನೆಮನಗಳನ್ನು ವ್ಯಾಪಿಸಿಕೊಂಡು ಪದವಿಪೂರ್ವ ಶಿಕ್ಷಣವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ, ಆ ಮೂಲಕ ತಮ್ಮ ನಿಜಪ್ರತಿಭೆಯನ್ನು ಅನಾವರಣಗ ೊಳಿಸಿಕೊಳ್ಳಬೇಕೆಂದಿದ್ದರೆ ಅದು ಕೇವಲ 'ಸನ್ಮಾರ್ಗ' ಕಾಲೇಜಿನಲ್ಲಿ ಮಾತ್ರ ಸಾಧ್ಯ ಎಂಬಷ್ಟರ ಮಟ್ಟಿಗೆ ಕಾಲೇಜು ಬೆಳೆದು ನಿಂತಿದೆ.

ನಾಡಿನ ಪ್ರತಿಷ್ಠಿತ ಸಂಸ್ಥೆಯಾದ ಃಂಖಇನ ಸಹಯೋಗದೊಂದಿಗೆ ಅನುಭವಿ ಉಪನ್ಯಾಸಕರ ಟಿಪ್ಪಣಿಗಳ ಜೊತೆಗೆ ಅಕ್ಯಾಡೆಮಿಯ ಹಲವು ಉಪಯುಕ್ತ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ನೀಡಿ, ಅವರ ಜ್ಞಾನದಾಹವನ್ನು ತಣಿಸುವ ಸದುದ್ದೇಶ ಸನ್ಮಾರ್ಗ ಕಾಲೇಜಿನದು. ಹೀಗಾಗಿ ಆರಂಭಿಕ ವರ್ಷದಿಂದ ಪ್ರಸ್ತುತ ವರ್ಷದವರೆಗೆ ಕಾಲೇಜಿನ ಫಲಿತಾಂಶ ಊರ್ಧ್ವಮುಖವಾಗಿ ಸಾಗುತ್ತಿರುವದು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಕಾಲೇಜು ಯಾವ ರೀತಿಯ ಶ್ರಮಿಕಭಾವನೆ ಹೊಂದಿದೆ ಎಂಬುದರ ದ್ಯೋತಕವಾಗಿದೆ.

ಇಂತಹ ಶ್ರಮಿಕ ಭಾವನೆಯ ಕಾರಣದಿಂದಾಗಿಯೇ ವರ್ಷದಿಂದ ವರ್ಷಕ್ಕೆ ದಾಖಲಾತಿ ಸಂಖ್ಯೆಯಲ್ಲಿ ಅಧಿಕವಾಗುತ್ತಿರುವದರ ಜೊತೆಗೆ ಫಲಿತಾಂಶವೂ ಉತ್ತಮ ಶ್ರೇಣಿಯಲ್ಲಿ ಕಂಡು ಬರುತ್ತಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ವಿಕಸನದ ಜೊತೆಗೆ ಕ್ರೀಡಾ ರಂಗಕ್ಕೆ ಸಮವಾದ ಪ್ರಾತಿನಿಧ್ಯ, ಪ್ರೋತ್ಸಾಹ ನೀಡುತ್ತಲೇ ಬಂದಿರುವುದು ಕಾಲೇಜಿನ ಹೆಗ್ಗಳಿಕೆ. 2018ರಲ್ಲಿ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿವನ್ನು ಆಯೋಜಿಸುವ ಜವಾಬ್ದಾರಿಯನ್ನು ಪದವಿಪೂರ್ವ ಶಿಕ್ಷಣ ಇಲಾಖೆಯು ಸನ್ಮಾರ್ಗ ಕಾಲೇಜಿಗೆ ವಹಿಸಿತು. ಪಂದ್ಯಾವಳಿಯಲ್ಲಿ ಅಂದಿನ ಉಪನಿರ್ದೇಶಕರಾದ ಎಸ್. ಎಸ್ ಹಿರೇಮಠರ ಪ್ರೋತ್ಸಾಹ, ಮಾರ್ಗದರ್ಶನ, ಸಂಸ್ಥೆಯ ಚೇರಮನ್ ಪ್ರೊ. ರಾಜೇಶ ಕುಲಕರ್ಣಿ ಹಾಗೂ ಅವರ 'ಯುವ ಬ್ರಿಗೇಡ್' ಜೊತೆಗೆ ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಶ್ರಮ ಸಾರ್ಥಕ್ಯ ರೂಪ ಪಡೆದುಕೊಂಡು ಗದುಗಿನ ಶೈಕ್ಷಣಿಕ ವಲಯದಲ್ಲಿ 'ಸನ್ಮಾರ್ಗ ಕಾಲೇಜು' ಎಲ್ಲರ ಕಣ್ಮಣಿಯಾಗಿದೆ.

ಕಳೆದ ವರ್ಷ ಕರ್ನಾಟಕ ಮಾತೆ ಭುವನೇಶ್ವರಿಯ ರಾಜ್ಯೋತ್ಸವವನ್ನು ಪಂಚ ಸಹಸ್ರ ಕನ್ನಡ ಧ್ವಜಗಳನ್ನು ಶೈಕ್ಷಣಿಕ ಸಂಸ್ಥೆ, ವಿವಿಧ ಇಲಾಖೆ, ಸಾರ್ವಜನಿಕರಿಗೆ ವಿತರಿಸುವ ಸಂದರ್ಭದಲ್ಲಿ ಅಮೋಘ ಪಾದಯಾತ್ರೆಯನ್ನು ಕೈಕೊಂಡು, ಕನ್ನಡ ನಾಡು-ನುಡಿಗೆ ತಮ್ಮ ನಮನವನ್ನು ಸಲ್ಲಿಸಿತು. ಸಂಸ್ಥೆ, ಕಾಲೇಜು ಇನ್ನೂ ಹೆಚ್ಚಿನ ಶ್ರೇಯಸ್ಸನ್ನು ಪಡೆಯಲು ಗದಗ-ಬೆಟಗೇರಿ ಹಾಗೂ ಸುತ್ತಲಿನ ಹತ್ತಾರು ಪ್ರದೇಶಗಳ ಪಾಲಕ ವಿದ್ಯಾರ್ಥಿ ವೃಂದದ ಸಹಾಯ ಸಹಕಾರಗಳನ್ನು ಗೌರವ, ವಿನಯಪೂರ್ವಕವಾಗಿ ನಿರೀಕ್ಷಿಸುತ್ತಿದೆ. ಹೆಮ್ಮೆಯ 'ಸನ್ಮಾರ್ಗ ಕಾಲೇಜು'.

ಕಳೆದ ಐದು ವರ್ಷಗಳಲ್ಲಿ ಅನೇಕ ಸಾಧನಾಸಿದ್ಧಿಗಳನ್ನು ಸಾಧಿಸಿಕೊಂಡು 6ನೇ ವರ್ಷದತ್ತ ದಿಟ್ಟ, ದೃಢವಾದ ಹೆಜ್ಜೆಗಳನ್ನಿಡುತ್ತ ಸಾಗುತ್ತಿರುವ 'ಸ್ಟುಡೆಂಟ್ಸ್ ಎಜ್ಯುಕೇಶನ್ ಸೊಸೈಟಿ'ಯ 'ಸನ್ಮಾರ್ಗ ಪದವಿಪೂರ್ವ ವಿಜ್ಞಾನ ಹಾಗೂ ವಾಣಿಜ್ಯ' ವಿದ್ಯಾಲಯಕ್ಕೆ ಹೃತ್ಪೂರ್ವಕ ಅಭಿನಂದನೆ.

**–ಪ್ರೊ. ಮುರಳೀಧರ ಸಂಕನೂರ.**
ಸನ್ಮಾರ್ಗ ಪ.ಪೂ ಮಹಾವಿದ್ಯಾಲಯ, ಗದಗ.

# 38 ವರ್ಷಗಳ ಬಳಿಕ ಬೈಸಿಕಲ್ ಕಳ್ಳನ ಬಂಧನ

■ವಿಜಯಸಾಕ್ಷಿ ಸುದ್ದಿ, ಕೋಲಾರ

ದೊಡ್ಡ ಮಟ್ಟದಲ್ಲಿ ಬೈಸಿಕಲ್‌ಗಳನ್ನು ಕದ್ದಿದ್ದ ವ್ಯಕ್ತಿಯೋರ್ವನನ್ನು ಮೂವತ್ತೆಂಟು ವರ್ಷಗಳ ಬಳಿಕ ಕೆಜಿಎಫ್ ಪೊಲೀಸರು ಬಂಧಿಸಿದ್ದಾರೆ.

ಕೆಜಿಎಫ್ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಂ ಶಾಂತರಾಜು ಅವರ ಸೂಚನೆ ಮೇರೆಗೆ ಆರೋಪಿಯ ಗುರುತು ದೃಢಪಡಿಸಲು ವ್ಯಕ್ತಿಯ ಹೆಬ್ಬೆರಳಿನ ಗುರುತನ್ನು ಲ್ಯಾಬ್‌ಗೆ ಕಳುಹಿಸಲಾಗಿತ್ತು. ತಜ್ಞರು ದೃಢಪಡಿಸಿದ ಹಿನ್ನೆಲೆಯಲ್ಲಿ ಆತನನ್ನು ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಜೊತೆ ಮಾತನಾಡಿದ ಶಾಂತರಾಜು, ಪೊಲೀಸ್ ದಾಖಲೆಗಳ ಪ್ರಕಾರ ಆರೋಪಿಯನ್ನು ಆಂಡರ್ಸನ್‌ಪೇಟೆ ನಿವಾಸಿ ಪಾಷಾ ಜಾನ್ ಎಂದು ಗುರುತಿಸಲಾಗಿದೆ. ಆತನಿಗೆ ಈಗ ಸುಮಾರು 62 ವರ್ಷ ವಯಸ್ಸಾಗಿದ್ದು ಎಸ್‌ಟಿ ಬ್ಲಾಕ್‌ನ ನಿವಾಸಿ ಜಾನ್ ದೂರಿನ ಮೇರೆಗೆ ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ. ಆಂಡ್ರಸನ್‌ಪೇಟೆಯಲ್ಲಿ ಸೈಕಲ್ ಕಳ್ಳತನವಾಗಿದ್ದು, ಸೈಕಲ್‌ನ ಮೌಲ್ಯ ಇನ್ನೂರೈವತ್ತು ರೂಪಾಯಿ ಎಂದು ದೂರಿನಲ್ಲಿ ತಿಳಿಸಿದ್ದು, ದೂರಿನ ಮೇರೆಗೆ ಆಂಡ್ರಸನ್‌ಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ನಂತರ ತನಿಖೆಯ ಸಮಯದಲ್ಲಿ, ಪಾಷಾ ಜಾನ್ ಅಪರಾಧದಲ್ಲಿ ಭಾಗಿಯಾಗಿರುವುದು ಪತ್ತೆಯಾಗಿತ್ತು. ಆ ನಂತರ ಆತನ ವಿರುದ್ಧ ಕಳ್ಳತನ ಪ್ರಕರಣದಡಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಈ ಆರೋಪದ ಮೇಲೆ ನ್ಯಾಯಾಲಯದ ಮುಂದೆ ಚಾರ್ಜ್ ಶೀಟ್ ಸಲ್ಲಿಸಲಾಗಿತ್ತು. ಆದರೆ ಅಂದು ಅವರು ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ. ಹೀಗಾಗಿ ನ್ಯಾಯಾಧೀಶರು 1985ರಲ್ಲಿ ಜಾಮೀನು ರಹಿತ ವಾರಂಟ್ ಆದೇಶ ಹೊರಡಿಸಿದ್ದರು. ಅಂದಿನಿಂದ ಪಾಷಾ ಜಾನ್ ನಾಪತ್ತೆಯಾಗಿದ್ದರು.

ಕಳೆದ ಸಭೆಯಲ್ಲಿ ಶಾಂತರಾಜು ಅವರು ವಾರೆಂಟ್ ಅನ್ನು ಕಾರ್ಯಗತಗೊಳಿಸಲು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು. ಇನ್ನು ದೀರ್ಘಕಾಲದಿಂದ ಬಾಕಿ ಇರುವ ಪ್ರಕರಣಗಳಲ್ಲಿ(ಎಲ್‌ಪಿಆರ್) ತಲೆಮರೆಸಿಕೊಂಡಿರುವ ವ್ಯಕ್ತಿಯನ್ನು ಪತ್ತೆಹಚ್ಚಲು ಸೂಚಿಸಿದರು. ಅದರಂತೆ ಪಾಷಾ ಜಾನ್ ಅವರನ್ನು ಬಂಧಿಸಲಾಗಿದೆ. ಅವರ ಗುರುತನ್ನು ಖಚಿತಪಡಿಸಲು ಅವರ ಹೆಬ್ಬೆರಳಿನ ಗುರುತನ್ನು ಬೆರಳಚ್ಚು ತಜ್ಞರಿಗೆ ಕಳುಹಿಸಲಾಗಿದೆ.

ಅವರು ದೃಢಪಡಿಸಿದ ನಂತರ ಆತನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ ಎಂದರು.

# ತಿ.ನರಸಿಪುರ ರಸ್ತೆ ಅಪಘಾತದಲ್ಲಿ ರೈತ ಸಾವು: ಹೆದ್ದಾರಿ ತಡೆದು ಗ್ರಾಮಸ್ಥರಿಂದ ಪ್ರತಿಭಟನೆ

■ವಿಜಯಸಾಕ್ಷಿ ಸುದ್ದಿ, ಮೈಸೂರು

ತಿ. ನರಸಿಪುರ ಕೊಳ್ಳೆಗಾಲ ಹೆದ್ದಾರಿಯಲ್ಲಿ 78 ವರ್ಷದ ರೈತ ರಸ್ತೆ ಅಪಘಾತದಲ್ಲಿ ಮೃತಪಟ್ಟ ಕಾರಣ ಅಲ್ಲಿನ ಗ್ರಾಮಸ್ಥರು ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್ ಹೆಚ್‌ಎಐ) ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿದ್ದು, ರಸ್ತೆಯ ಮೇಲಿಂದ ಮೃತ ರೈತನ ತೆಗೆಯಲು ಪೊಲೀಸರಿಗೆ ಅಡ್ಡಿಯಾಗಿ ವಿರೋಧ ವ್ಯಕ್ತಪಡಿಸಿದ್ದಾರೆ.

ರೈತ ನಾಗರಾಜ್ ತಮ್ಮ ಪುತ್ರನ ಜೊತೆಗೆ ಬೈಕ್ ಚಾಲನೆ ಮಾಡುತ್ತಿದ್ದಾಗ ಬೆಳಿಗ್ಗೆ 11 ಗಂಟೆ ಸುಮಾರಿಗೆ ಎದುರು ಬದಿಯಿಂದ ಬಂದ ಮತ್ತೊಂದು ಬೈಕ್ ಡಿಕ್ಕಿ ಹೊಡೆದಿದ್ದರ ಪರಿಣಾಮ ಈ ಅಪಘಾತ ಸಂಭವಿಸಿದೆ.

ರಸ್ತೆ ಮೇಲೆ ಬಿದ್ದ ನಾಗರಾಜ್ ಅವರ ತಲೆಗೆ ತೀವ್ರ ಗಾಯಗಳಾಗಿದ್ದು, ಸ್ಥಳದಲ್ಲೇ ಮೃತಪಟ್ಟಿದ್ದಾರೆ.

# ತಾಲೂಕು ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆ



■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಇಲ್ಲಿಯ ಬಾಲಕಿಯರ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ವಲಯಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಸಮೀಪದ ಅಡವಿಸೋಮಾಪೂರ ಹತ್ತಿರವಿರುವ ಬಿಪಿನ್ ಚಿಕ್ಕಟ್ಟಿ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆಯ ಆಶ್ರಯದಲ್ಲಿ ಜರುಗಿದ ಪ್ರೌಢಶಾಲೆಗಳ ವಲಯಮಟ್ಟದ ಕ್ರೀಡಾಕೂಟದ ವೈಯಕ್ತಿಕ ಆಟದಲ್ಲಿ ರಜಿಯಾ ಕದಡಿ ಉದ್ದ ಜಿಗಿತ ಹಾಗೂ ತ್ರಿವಿಧ ಜಿಗಿತದಲ್ಲಿ ಪ್ರಥಮ, ಹುಲಿಗೆಮ್ಮ ಗಾಜಿ 1500 ಮತ್ತು 3000ಮೀ ಓಟದಲ್ಲಿ ದ್ವಿತೀಯ, ವೈಷ್ಣವಿ ನೆಲಗಡ್ಡದ ನಡಿಗೆಯಲ್ಲಿ ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಗುಂಪು ಆಟದಲ್ಲಿ ವಾಲಿಬಾಲ್, ಥ್ರೋಬಾಲ್‌ದಲ್ಲಿ ಪ್ರಥಮ ಹಾಗೂ ಕಬಡ್ಡಿಯಲ್ಲಿ ದ್ವಿತೀಯ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಲಕ್ಕುಂಡಿ, ಹರ್ಲಾಪೂರ, ತಿಮ್ಮಾಪೂರ, ಹಾತಲಗೇರಿ, ಅಡವಿಸೋಮಾಪೂರ ಗ್ರಾಮಗಳ 6 ಶಾಲೆಗಳು ಕ್ರೀಡಾಕೂಟದಲ್ಲಿ ಭಾಗವಹಿಸಿದ್ದವು.


## ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.

ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..

ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.

E-mail: vijayasakshidaily@gmail.com

ಮೊ : 9019256545

# ಸರ್ಕಾರಿ ವ್ಯಾಜ್ಯಗಳ ನಿರ್ವಹಣಾ ಅಧಿನಿಯಮ ಜಾರಿಗೆ

▶▶ ಮೊದಲನೇ ಪುಟದಿಂದ

ಇವೆ ಎಂದು ಸಚಿವರು ವಿವರಿಸಿದರು.

ಪ್ರಕರಣಗಳಲ್ಲಿ ಸೋಲು ಉಂಟಾಗುತ್ತಿರುವುದರಿಂದ ಸರ್ಕಾರದಿಂದ ಅಮೂಲ್ಯವಾದ ಆಸ್ತಿ ಮತ್ತು ತೆರಿಗೆದಾರರ ಹಣ ವೆಚ್ಚವಾಗುತ್ತಿರುವುದನ್ನು ಗಮನಿಸಿ, ರಾಜ್ಯದಲ್ಲಿನ ನ್ಯಾಯಾಲಯಗಳು ಮತ್ತು ಶಾಸನಬದ್ಧ ನ್ಯಾಯಾಧಿಕರಣಗಳ ಮುಂದೆ ಸರ್ಕಾರಿ ವ್ಯಾಜ್ಯಗಳನ್ನು ನಡೆಸುವ ಕುರಿತಂತೆ ನಿಯಮಗಳು, ಆದೇಶಗಳು, ಅಧಿಸೂಚನೆಗಳು, ಸುತ್ತೋಲೆಗಳು ಮುಂತಾದ ದಿಕ್ಸೂಚಿ ರಹಿತ ನಿರ್ದೇಶನಗಳನ್ನು ಈ ಕಾನೂನಿನ ಮೂಲಕ ಬದಲಾಯಿಸಲಾಗಿದೆ. ವ್ಯಾಜ್ಯಗಳಲ್ಲಿ ಸರ್ಕಾರಿ ವಕೀಲರು ಮೌಖಿಕ ವಾದ-ಪ್ರತಿವಾದಗಳ ಜೊತೆಗೆ ಲಿಖಿತ ರೂಪದ ವಾದ-ಪ್ರತಿವಾದಗಳ ಸಲ್ಲಿಕೆಯನ್ನು ಕಡ್ಡಾಯಗೊಳಿಸಲಾಗಿದೆ. ಇಂಥ ಲಿಖಿತ ವಾದ-ಪ್ರತಿವಾದಗಳ ಸಲ್ಲಿಕೆಯನ್ನು ಮಾಡುವ ಮೊದಲು ಒಂದು ಪ್ರಕ್ರಿಯೆಯನ್ನು ವ್ಯಾಖ್ಯಾನಿಸಲಾಗಿದೆ ಎಂದು ಸಚಿವರು ವಿವರಿಸಿದರು.

# ಪೋಕ್ಸೋ ಕಾಯ್ದೆಯ ಗಂಭೀರತೆಯ ಅರಿವಿರಲಿ

▶▶ ಮೊದಲನೇ ಪುಟದಿಂದ

ರಕ್ಷಣೆಯನ್ನು ಹೊಂದಬೇಕು ಎಂದರು. ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಮೇಶ ಕಳ್ಳಿಮನಿ ಮಾತನಾಡಿ, ಇಂದಿನ ಮಕ್ಕಳೇ ಇಂದಿನ ಪ್ರಜೆಗಳಾಗಿದ್ದು, ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳಬೇಕು ಎಂದು ತಿಳಿಸಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಉಪನಿರ್ದೇಶಕರಾದ ಎಂ.ಎ ರಡ್ಡೇರ ಮಾತನಾಡಿ, ಪಾಲಕರು, ಶಿಕ್ಷಕರು ಹಾಗೂ ಎಲ್ಲಾ ಇಲಾಖೆಯ ಅಧಿಕಾರಿ-ಸಿಬ್ಬಂದಿಗಳು ಮಕ್ಕಳ ಹಕ್ಕುಗಳನ್ನು ರಕ್ಷಣೆ ಮಾಡಬೇಕು. ಅವರಿಗಾಗಿ ಇರುವ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಪ್ರಯತ್ನಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಉಪಾಧ್ಯಕ್ಷ ಅಬುಬಕರ ಅಣ್ಣಿಗೇರಿ, ಉಮರ್‌ಫಾರುಕ ಹುಬ್ಬಳ್ಳಿ ಸೇರಿದಂತೆ ಶಾಲಾ ಸಿಬ್ಬಂದಿ, ಮಕ್ಕಳು ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯ ಎಚ್.ಎ ಫಾರೂಖಿ ಸ್ವಾಗತಿಸಿದರು. ಶ್ರೀಕಾಂತ ಬಟ್ಟೂರ ನಿರೂಪಿಸಿ ವಂದಿಸಿದರು.

## ಮಳೆರಾಯನ ಅವಕೃಪೆಯಿಂದ ದಿಕ್ಕು ಕಾಣದ ರೈತ: ಬಿತ್ತಿದ ಬೆಳೆ ಉಳಿಸಿಕೊಳ್ಳಲು ನಾನಾ ಸಾಹಸ

# ಚರಂಡಿ, ಹಳ್ಳದ ನೀರಿಗೂ ಬಂತು ಬೇಡಿಕೆ!





ಒಂದು ಎಕರೆ ಬೆಳೆಗೆ ನೀರು ಕಲ್ಪಿಸಲು ಡೀಸೆಲ್, ಆಳಿನ ವೆಚ್ಚ ಸೇರಿ ಕನಿಷ್ಠ 4 ಸಾವಿರ ರೂ ಖರ್ಚು ಬರುತ್ತದೆ. ಕೃಷಿಯನ್ನೇ ಬದುಕಾಗಿಸಿಕೊಂಡಿರುವ ನಮ್ಮಂತಹ ರೈತರಿಗೆ ಮಳೆಯೇ ಆಧಾರ. ಇದೀಗ ಮಳೆ ಕೈಕೊಟ್ಟಿದ್ದರಿಂದ ಬೆಳೆ ಉಳಿಸಿಕೊಳ್ಳದಿದ್ದರೆ ನಷ್ಟ ಅನುಭವಿಸಬೇಕಾಗುತ್ತದೆ. ಖರ್ಚು ಹೆಚ್ಚಾದರೂ ಸರಿ, ಉತ್ತಮ ಬೆಲೆ ಸಿಕ್ಕರೆ ಪೂರ್ಣ ಪ್ರಮಾಣದ ನಷ್ಟದಿಂದ ತಪ್ಪಿಸಿಕೊಳ್ಳಬಹುದು. ಈ ಹಿಂದೆಯೂ ಒಣಗುತ್ತಿರುವ ಉಳ್ಳಾಗಡ್ಡಿ ಬೆಳೆಗೆ ಟ್ಯಾಂಕರ್ ನೀರು ಹಾಯಿಸಿ ನಷ್ಟದಿಂದ ಪಾರಾಗಿದ್ದೇನೆ. ಆದರೆ ಎಲ್ಲ ರೈತರಿಗೂ ಇದು ಕಷ್ಟಸಾಧ್ಯ. ಇನ್ನಾದರೂ ಮಳೆರಾಯ ಕೃಪೆ ತೋರಬೇಕು. ಸರ್ಕಾರ ತಾಲೂಕನ್ನು ಬರಗಾಲಪೀಡಿತ ಎಂದು ಘೋಷಿಸಿ ರೈತರ ಹಿತ ಕಾಪಾಡಬೇಕು.

– ಎಂ.ಆರ್ ಹವಳದ.
ಪ್ರಗತಿಪರ ರೈತರು, ಅಡರಕಟ್ಟಿ.

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕಳೆದ ಒಂದು ತಿಂಗಳಿಂದ ವರುಣರಾಯನ ಮುನಿಸಿಗೆ ಗುರಿಯಾಗಿರುವ ರೈತರು, ಒಣಗುತ್ತಿರುವ ಆಳೆತ್ತರದ ಬೆಳೆಗಳನ್ನು ಸಂರಕ್ಷಿಸಿಕೊಳ್ಳಲು ಇದೀಗ ಟ್ಯಾಂಕರ್ ನೀರಿಗೆ ಮೊರೆ ಹೋಗುತ್ತಿದ್ದಾರೆ.

ಮಳೆ ಕೊರತೆಯಿಂದ ಮಸಾರಿ ಭಾಗದ ಬೆಳೆಗಳು ಸಂಪೂರ್ಣ ಒಣಗಿದ್ದು, ಕಪ್ಪು ಮಣ್ಣಿನ ಜಮೀನಿನಲ್ಲಿನ ಬೆಳೆಗಳು ಬಾಡಿ ನಿಂತಿವೆ. ಸಾವಿರಾರು ರೂ. ಖರ್ಚು ಮಾಡಿ ಬೆಳೆದಿರುವ ಶೇಂಗಾ, ಹತ್ತಿ, ಉಳ್ಳಾಗಡ್ಡಿ, ಮೆಣಸಿನಕಾಯಿ, ಹೆಸರು ಇತರೆಲ್ಲ ಬೆಳೆಗಳು ಬಿಸಿಲ ಝಳಕ್ಕೆ ಕಮರುತ್ತಿವೆ. ಬೋರ್‌ವೆಲ್ ಮತ್ತಿತರ ನೀರಿನ ಮೂಲ ಇಲ್ಲದ ಕೆಲ ರೈತರು ಸಮೀಪದಲ್ಲಿ ಚರಂಡಿ, ಹಳ್ಳ ಹರಿಯುತ್ತಿದ್ದರೆ ಡೀಸಲ್ ಪಂಪ್‌ಸೆಟ್ ಮೂಲಕ ಆ ನೀರನ್ನು ಬಳಸಿಕೊಳ್ಳುತ್ತಿದ್ದಾರೆ. ಮಳೆರಾಯನನ್ನೇ ನಂಬಿರುವ ರೈತರು ಒಣಗುತ್ತಿರುವ ಬೆಳೆಯನ್ನು ಉಳಿಸಿಕೊಳ್ಳಲಾಗದೇ ಮರುಗುತ್ತಿರುವುದು ಸದ್ಯದ ಪರಿಸ್ಥಿತಿ.

ಪ್ರಸಕ್ತ ಮುಂಗಾರಿನಲ್ಲಿ ಜೂನ್ ಮತ್ತು ಆಗಸ್ಟ್ ತಿಂಗಳಲ್ಲಿ ಮಳೆಯ ಪ್ರಮಾಣ ಶೂನ್ಯ. ಜುಲೈ ತಿಂಗಳಲ್ಲಾದ ಮಳೆಯನ್ನು ನಂಬಿ ಗೋವಿನ ಜೋಳ ಬಿತ್ತನೆ ಮಾಡಿದ್ದು, ನಿರೀಕ್ಷೆಯನ್ನೂ ಮೀರಿ 32,200 ಹೆಕ್ಟೇರ್ ಕ್ಷೇತ್ರದಲ್ಲಿ ಬಿತ್ತನೆಯಾಗಿದೆ.

ಆದರೆ ಹೆಚ್ಚು ತೇವಾಂಶದ ಅವಶ್ಯಕತೆಯಿರುವ ಈ ಬೆಳೆ ತೇವಾಂಶದ ಕೊರತೆಯಿಂದ ಒಣಗತೊಡಗಿದೆ. ದಿನ ಬಳಕೆಯ ನಿರುಪಯುಕ್ತ ನೀರು ಸಂಗ್ರಹಕ್ಕಾಗಿ ರೈತರು ತಮ್ಮ ಜಮೀನಿನ ಪಕ್ಕ ತಗ್ಗು-ಗುಂಡಿ ತೋಡಿ ನೀರು ಸಂಗ್ರಹವಾಗುವುದನ್ನು ಕಾಯ್ದು, ರಾತ್ರೋರಾತ್ರಿ ಬೆಳೆಗೆ ನೀರುಣಿಸುತ್ತಿದ್ದಾರೆ.

ಲಕ್ಷ್ಮೇಶ್ವರ ಪಟ್ಟಣದಿಂದ ನಿತ್ಯ ಚರಂಡಿ ಮೂಲಕ ಹರಿಯುವ ನೀರನ್ನು ಹಳ್ಳದ ಅಕ್ಕಪಕ್ಕದ ರೈತರು ತಮ್ಮ ಬೆಳೆಗೆ ಬಳಸಿಕೊಳ್ಳುತ್ತಿದ್ದಾರೆ. ತಾಲೂಕಿನ ಅಡರಕಟ್ಟಿ ಗ್ರಾಮದ ಪ್ರಗತಿಪರ ರೈತರಾದ ಎಂ.ಆರ್ ಹವಳದ ಅವರು ಟ್ಯಾಂಕರ್ ಮೂಲಕ ಗೋವಿನಜೋಳದ ಬೆಳೆಗೆ ನೀರುಣಿಸುವ ಕಾರ್ಯ ಮಾಡುತ್ತಿದ್ದಾರೆ.

ಕೊಂಡಿಕೊಪ್ಪ ಹತ್ತಿರವಿರುವ ಅವರ ಜಮೀನಿನ ಬಳಿ ಹಳ್ಳದಲ್ಲಿ ನಿಂತಿರುವ ನೀರನ್ನು ತಮ್ಮದೇ 2 ಟ್ರ್ಯಾಕ್ಟರ್ ಟ್ಯಾಂಕರ್ ಮೂಲಕ ತಂದು ಸ್ಪಿಂಕ್ಲರ್ ಮೂಲಕ ಬೆಳೆಗೆ ನೀರಿನ ವ್ಯವಸ್ಥೆ ಕಲ್ಪಿಸುತ್ತಿದ್ದಾರೆ. ಕಳೆದ ಒಂದು ವಾರದಿಂದ ಈ ಕಾರ್ಯ ಆರಂಭಿಸಿರುವ ಅವರು, ಈಗಾಗಲೇ 10 ಎಕರೆ ಬೆಳೆಗೆ ನೀರು ಪೂರೈಸಿ ಒಣಗುತ್ತಿರುವ ಬೆಳೆಯನ್ನು ಉಳಿಸಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ.

## ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಪೂಜ್ಯ ದಾದಿ ಪ್ರಕಾಶಮಣಿ ಅವರ ಸ್ಮೃತಿ ದಿನ ಕಾರ್ಯಕ್ರಮ

# ಯುವಕರು ಭಾರತದ ಹೆಮ್ಮೆಯ ಆಸ್ತಿ




ಯುವಕರು ಆಧ್ಯಾತ್ಮಿಕತೆಯನ್ನು ಜೀವನದಲ್ಲಿ ಅಳವಡಿಸಿಕೊಂಡು ದೇಶದ ಹಿರಿಮೆ-ಗರಿಮೆಗಳನ್ನು ಹೆಚ್ಚಿಸಬೇಕಾಗಿದೆ. ತಮ್ಮಲ್ಲಿರುವ ಮಾನಸಿಕ ಚಿಂತೆ ಹಾಗೂ ವ್ಯರ್ಥ ವಿಚಾರಗಳನ್ನು ಬದಿಗಿಟ್ಟು, ಆಧ್ಯಾತ್ಮಿಕ ಚಿಂತನೆಯಲ್ಲಿ ತೊಡಗಬೇಕಾಗಿದೆ. ಆಧ್ಯಾತ್ಮಿಕತೆ ನಮ್ಮಲ್ಲಿರುವ ಈರ್ಷೆ, ದ್ವೇಷ ಹಾಗೂ ಅಸೂಯೆತನಗಳನ್ನು ದೂರ ಮಾಡಿ, ವಿಶ್ವಬಂಧುತ್ವವನ್ನು ಕಲಿಸುತ್ತದೆ. ಪರಮಾತ್ಮ ಒಬ್ಬನೇ. ನಾವು ಎಲ್ಲರೂ ಒಂದೇ ಕುಟುಂಬದವರು.

– ಬ್ರಹ್ಮಕುಮಾರಿ ಪ್ರಭಕ್ಕ.

■ ವಿಜಯಸಾಕ್ಷಿ ಸುದ್ದಿ, ನರಗುಂದ

ನಮ್ಮಲ್ಲಿ ಜನ ಬಲವಿದೆ, ಧನ ಬಲವೂ ಇದೆ. ಆದರೆ, ಆಧ್ಯಾತ್ಮಿಕ ಬಲ ಇಲ್ಲ. ಈ ಆಧ್ಯಾತ್ಮಿಕ ಬಲವನ್ನು ಈಶ್ವರೀಯ ಶಕ್ತಿಯಿಂದ ಮಾತ್ರ ತುಂಬಿಸಿಕೊಳ್ಳಲು ಸಾಧ್ಯವೆಂದು ಹುಬ್ಬಳ್ಳಿ ವಲಯ ಕೇಂದ್ರದ ರಾಜಯೋಗಿನಿ ಬ್ರಹ್ಮಕುಮಾರಿ ನಿರ್ಮಲಜಿ ಅಕ್ಕನವರು ಹೇಳಿದರು.

ಪಟ್ಟಣದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಸೇವಾಕೇಂದ್ರದಲ್ಲಿ ಪೂಜ್ಯ ದಾದಿ ಪ್ರಕಾಶಮಣಿ ಅವರ 16ನೇ ವರ್ಷದ ಸ್ಮೃತಿ ದಿನದ ಅಂಗವಾಗಿ ಆಚರಿಸಿದ ರಕ್ಷಾ ಬಂಧನ, ವಿಶ್ವಬಂಧುತ್ವ ದಿನ ಹಾಗೂ ಯುವ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶ್ರಾವಣ ಮಾಸವು ಜ್ಞಾನ ಶ್ರವಣ ಮಾಡುವ ಮಾಸವಾಗಿದೆ. ಶ್ರಾವಣ ಮಾಸದಲ್ಲಿ ಹೆಚ್ಚು ಹೆಚ್ಚು ಆಧ್ಯಾತ್ಮಿಕ ವಿಚಾರಗಳ ಕಡೆಗೆ ಒಲವು ತೋರಿಸುತ್ತೇವೆ. ಶ್ರಾವಣ ಮಾಸದಲ್ಲಿ ಅನೇಕ ಹಬ್ಬಗಳನ್ನು ಆಚರಿಸಲಾಗುತ್ತದೆ. ಅದರಲ್ಲಿ ಮೊದಲಿಗೆ ನಾಗರ ಪಂಚಮಿ ಹಬ್ಬ ಅಂದರೆ ನಮ್ಮಲ್ಲಿರುವ ಪಂಚ ವಿಕಾರಗಳನ್ನು ದೂರ ಮಾಡಿಕೊಳ್ಳುವುದುಕ್ಕೋಸ್ಕರ ಶ್ರೀರಕ್ಷೆಯನ್ನು ಪರಮಾತ್ಮನಿಂದ ಕಟ್ಟಿಕೊಳ್ಳುತ್ತೇವೆ ಎಂದರು.

ಬ್ರಹ್ಮಕುಮಾರಿ ಪ್ರಭಕ್ಕ ಮಾತನಾಡಿ, ನಾವು ಒಬ್ಬರಿಗೊಬ್ಬರು ಆತ್ಮೀಯವಾಗಿ ಮಾತನಾಡುವುದಕ್ಕಿಂತ ಮೊಬೈಲ್ ಮತ್ತು ದೂರದರ್ಶನಗಳು ಎಂಬ ಯಂತ್ರಗಳ ಜೊತೆ-ಗೆ ಒಡನಾಟವನ್ನು ಹೆಚ್ಚು ಮಾಡಿಕೊಂಡಿದ್ದೇವೆ. ಯುವಕರು ಇವುಗಳಿಂದ ಜಾಗೃತರಾಗಬೇಕಾಗಿದೆ.

ಯುವಶಕ್ತಿ ತಮ್ಮ ಅಮೂಲ್ಯ ಸಮಯವನ್ನು ಇಂತಹ ಕಾರ್ಯಗಳಲ್ಲಿ ವ್ಯರ್ಥ ಮಾಡದೇ ದೇಶ ಸೇವೆಯಲ್ಲಿ ತೊಡಗಿಸಿಕೊಳ್ಳುವ ಶಕ್ತಿಯಾಗಬೇಕು. ಯುವಕರು ಭಾರತ ದೇಶದ ಹೆಮ್ಮೆಯ ಆಸ್ತಿಯಾಗಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎಸ್.ವೈ ಪಾಟೀಲ, ಜಿ.ಆರ್ ಬೆಲ್ಲದ, ಎಮ್.ಬಿ ಪಾಟೀಲ, ರಾಜಯೋಗಿನಿ ಬ್ರಹ್ಮಕುಮಾರಿ ಮಂಗಳಾ ಅಕ್ಕ, ರಾಜಯೋಗಿನಿ ಬ್ರಹ್ಮಕುಮಾರಿ ಉಮಾ ಅಕ್ಕ, ರಾಜಯೋಗಿನಿ ಬ್ರಹ್ಮಯೋಗಿನಿ ರಾಜೇಶ್ವರಿ ಅಕ್ಕ, ಸಿದ್ದೇಶ್ವರ ಕಾಲೇಜಿನ ರಾಷ್ಟ್ರೀಯ ಸೇವಾದಳದ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಮತ್ತು ಈಶ್ವರೀಯ ಪರಿವಾರದವರು ಉಪಸ್ಥಿತರಿದ್ದರು.

# 'ಜನಪದ ಸಾಹಿತ್ಯ' ಬದುಕಿನ ಮೂಲಮಂತ್ರ

▶▶ ಮೊದಲನೇ ಪುಟದಿಂದ

ಎಲ್.ಎಸ್ ಅರಳಹಳ್ಳಿ ವಹಿಸಿದ್ದರು. ಡಾ.ಶಿವಾನಂದ ಹೂವಿನ, ಮಹಾಂತೇಶ ದಶಮನಿ, ಶೇಖಪ್ಪ ಗೊಜಗೋಜಿ, ಪೂರ್ಣಜಿ ಖರಾಟೆ, ಸಿ.ಜಿ ಹಿರೇಮಠ, ಗಂಗಾಧರ ಅರಳಿ, ಶರಣಪ್ಪ ಗುಳಗಣ್ಣನವರ, ಮಹಾಬಲೇಶ್ವರಪ್ಪ ಬೇವಿನಮರದ, ಬಸವರಾಜ ಸಂಗಪ್ಪಶೆಟ್ಟರ, ರತ್ನಾ ಕರ್ಕಿ, ಪ್ರತಿಮಾ ಮಹಾಜನಶೆಟ್ಟರ, ನಿರ್ಮಲಾ ಅರಳಿ, ಶಾರದಾ ಮಹಾಂತಶೆಟ್ಟರ, ಶೋಭಾ ಗಾಂಜಿ, ಅರುಂಧತಿ ಬಿಂಕದಕಟ್ಟಿ, ಮಹಾಂನಂದ ಕೊಣ್ಣೂರ, ಲತಾ ತಟ್ಟಿ ಸೇರಿದಂತೆ ಅಕ್ಕಳ ಬಳಗದ ಸದಸ್ಯರು ಇದ್ದರು. ನಿರ್ಮಲಾ ಅಡವಿ, ಗೌರಿ ಸಂಗಪ್ಪಶೆಟ್ಟರ, ಈರಣ್ಣ ಹೂಗಾರ, ಮಂಗಲಾ ಹಸರೆಡ್ಡಿ ಮುಂತಾದವರಿದ್ದರು.

# ಪವಿತ್ರ ತಾಣಗಳ ಶುಚಿತ್ವ, ಪಾವಿತ್ರ್ಯತೆ ಕಾಪಾಡಿ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಪಟ್ಟಣದ ಬಸಾಪುರ ಓಣಿಯಲ್ಲಿನ ದುರ್ಗಮ್ಮದೇವಿ ಮತ್ತು ದ್ಯಾಮವ್ವ ದೇವಿಯರ ದೇವಸ್ಥಾನದ ದೇವಿ ಮೂರ್ತಿಗಳ ಮೆರವಣಿಗೆ ಶನಿವಾರ ಪೂರ್ಣಕುಂಭ, ವಾದ್ಯಮೇಳದೊಂದಿಗೆ ನೆರವೇರಿತು.

ಮೂರ್ತಿ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಮಾಜಿ ಶಾಸಕ ಜಿ.ಎಸ್ ಗಡ್ಡದೇವರಮಠ, ದೇವಸ್ಥಾನಗಳು ಮನುಷ್ಯರನ್ನು ಸನ್ಮಾರ್ಗದತ್ತ ಕೊಂಡೊಯ್ಯುವ ಶ್ರದ್ಧಾ-ಭಕ್ತಿಯ ಕೇಂದ್ರಗಳಾಗಿವೆ. ನಮ್ಮ ಧರ್ಮ, ಸಂಸ್ಕೃತಿ, ಪರಂಪರೆಯ ಪ್ರತೀಕವಾದ ದೇವಸ್ಥಾನಗಳ ಜೀರ್ಣೋದ್ಧಾರದೊಂದಿಗೆ ನಿತ್ಯ ಈ ಪವಿತ್ರ ತಾಣದಲ್ಲಿ ಶುಚಿತ್ವ, ಪಾವಿತ್ರ್ಯತೆ ಕಾಪಾಡಬೇಕು. ಎಲ್ಲರೂ ಸೇರಿ ಸಮತಾಭಾವದಿಂದ ದೇವಸ್ಥಾನದಲ್ಲಿ ಹೊಸ ದೇವಿಮೂರ್ತಿಗಳನ್ನು ಪ್ರತಿಷ್ಠಾಪಿಸುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ಶನಿವಾರ ಮೂರ್ತಿಗಳ ಪುರಪ್ರವೇಶ ಕಾರ್ಯಕ್ರಮದ ನಿಮಿತ್ತ, ಪ್ರಮುಖ ಮಾರ್ಗಗಳ ಮೂಲಕ ದೇವಸ್ಥಾನದವರೆಗೆ ವಾದ್ಯವೈಭವದೊಂದಿಗೆ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. ಮೆರವಣಿಗೆಯಲ್ಲಿ ಓಣಿಯ ಹಿರಿಯರಾದ ಥಾಯಪ್ಪ ಬಸಾಪುರ, ತಿಪ್ಪಣ್ಣ ಸಂಶಿ, ಸೋಮಣ್ಣ ಬಸಾಪುರ, ರಾಮಣ್ಣ ಬಳಗಾನೂರ, ಶಿವಪ್ಪ ಬಸಾಪುರ, ಸಿದ್ದು ಕಲ್ಮಠ, ನಿಂಗಪ್ಪ ಕೋರಿ, ಮುತ್ತಣ್ಣ ಟೋಕಾಳಿ, ಸಿದ್ದಣ್ಣ ಗೋಡಿ, ನಿಂಗಪ್ಪ ರಾಮಗೇರಿ, ಮುತ್ತಣ್ಣ ಕಟಗಿ, ನಿಂಗಜ್ಜ ಟೋಕಾಳಿ ಸೇರಿದಂತೆ ಭಕ್ತಾದಿಗಳು ಪಾಲ್ಗೊಂಡರು.

ರವಿವಾರ ಶ್ರೀ ದೇವಿ ಮೂರ್ತಿಗಳ ಜಲವಾಸ, ಧಾನ್ಯಾದಿವಾಸ, ಹೋಮ-ಹವನ, ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಸೋಮವಾರ ಹೋಮ, ಯೋಗ, ಅಷ್ಟದಿಗ್ಬಂಧನ ಮತ್ತು ಮೂರ್ತಿ ಪ್ರತಿಷ್ಠಾಪನೆ ನಡೆಯಲಿದೆ. ಆ.29, ಮಂಗಳವಾರ ಶ್ರೀ ದುರ್ಗಮ್ಮದೇವಿ ಮತ್ತು ಶ್ರೀ ದ್ಯಾಮವ್ವದೇವಿ ಮೂರ್ತಿಗಳಿಗೆ ಉಡಿ ತುಂಬುವ ಕಾರ್ಯಕ್ರಮಗಳು ನಡೆಯಲಿವೆ ಎಂದು ದೇವಸ್ಥಾನ ಪಂಚ ಕಮಿಟಿ ತಿಳಿಸಿದೆ.

# 20 ದಿನಗಳಲ್ಲಿ ಐವರಿಂದ ನೇತ್ರದಾನ

▶▶ ಮೊದಲನೇ ಪುಟದಿಂದ

ರಂಗದಲ್ಲಿರುವ ವ್ಯಕ್ತಿಗಳೂ ಕ್ಲಬ್‌ನೊಂದಿಗೆ ಕೈಜೋಡಿಸಿ, ಪುಣ್ಯ ಕಾರ್ಯಕ್ಕೆ ಮುಂದಾಗಿದ್ದಾರೆ ಎನ್ನುತ್ತಾರೆ ಕ್ಲಬ್‌ನ ಅಧ್ಯಕ್ಷ ರಮೇಶ ಶಿಗ್ಲಿ.

ಗದಗ ನಗರದಲ್ಲಿ ಆ.25ರಂದು ನಿಧನರಾದ ಶ್ರೀಮತಿ ಸುಮಿತ್ರಾಬಾಯಿ ನಾರಾಯಣಸಾ ಜಿತ್ರೆ (94) ಅವರ ಕುಟುಂಬದವರ ಮನವೊಲಿಸಿ ಅವರ ಸಮ್ಮತಿ ಪಡೆಯುವಲ್ಲಿ ಯಶಸ್ವಿಯಾದರು. ನಂದೂ ಬೇವಿನಕಟ್ಟಿ ಹಾಗೂ ಎನ್.ಆರ್ ಖಟವಟೆ ಅವರ ಪ್ರಯತ್ನದ ಫಲವಾಗಿ ಈ ನೇತ್ರದಾನದಿಂದ ಅಂಧರೊಬ್ಬರು ಬಾಳಿನಲ್ಲಿ ಬೆಳಕು ಕಾಣುವಂತಾಗಿದೆ.

ನೇತ್ರದಾನಕ್ಕೆ ಸಹಕರಿಸಿದ ಕುಟುಂಬವನ್ನು, ಹುಬ್ಬಳ್ಳಿಯ ಎಂ.ಎಂ ಜೋಶಿ ಆಸ್ಪತ್ರೆಯ ತಜ್ಞರ ಹಾಗೂ ಸಿಬ್ಬಂದಿಯನ್ನು ಕ್ಲಬ್‌ನ ಕಾರ್ಯದರ್ಶಿ ಪ್ರವೀಣ ವಾರಕರ, ಖಜಾಂಚಿ ರಾಜು ಮಲ್ಲಾಡದ ಮುಂತಾದವರು ಶ್ಲಾಘಿಸಿದ್ದಾರೆ. ಈ ಸಂದರ್ಭದಲ್ಲಿ ಲಯನ್ಸ್ ಕ್ಲಬ್ ಹಾಗೂ ಲಯನ್ಸ್ ಲೇಡಿಸ್ ಕ್ಲಬ್‌ನ ಸದಸ್ಯರು ಉಪಸ್ಥಿತರಿದ್ದರು.

# ಎಕ್ಸ್‌ಪ್ರೆಸ್ ರೈಲಿಗೆ ಬೆಂಕಿ; ಹತ್ತು ಜನರ ಸಾವು

■ ವಿಜಯಸಾಕ್ಷಿ ಸುದ್ದಿ, ಮಧುರೈ

ತಮಿಳುನಾಡಿನ ಮಧುರೈ ರೈಲು ನಿಲ್ದಾಣದಲ್ಲಿ ಶನಿವಾರ ಪ್ಯಾಸೆಂಜರ್ ರೈಲಿನ ಕೋಚ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಕನಿಷ್ಠ10 ಜನ ಪ್ರಯಾಣಿಕರು ಸಾವನ್ನಪ್ಪಿದ್ದಾರೆ ಮತ್ತು 20 ಮಂದಿ ಗಾಯಗೊಂಡಿದ್ದಾರೆ.

ಶನಿವಾರ ಮುಂಜಾನೆ ಲಕ್ನೋ-ರಾಮೇಶ್ವರಂ ಎಕ್ಸ್‌ಪ್ರೆಸ್‌ನಲ್ಲಿ ಈ ಘಟನೆ ಸಂಭವಿಸಿದೆ ಎಂದು ರೈಲ್ವೆ ಮೂಲಗಳು ತಿಳಿಸಿದೆ.

ಮೃತರಲ್ಲಿ ಆರು ಮಂದಿ ಉತ್ತರ ಪ್ರದೇಶದವರಾಗಿದ್ದು, ಇವರು ರಾಮೇಶ್ವರಂಗೆ ತೀರ್ಥಯಾತ್ರೆಗೆ ತೆರಳುತ್ತಿದ್ದರು ಎಂದು ಮೂಲಗಳು ತಿಳಿಸಿವೆ. ಬೆಂಕಿ ಕಾಣಿಸಿಕೊಂಡ ಕೋಚ್‌ನಲ್ಲಿ ಒಟ್ಟು 55 ಪ್ರಯಾಣಿಕರಿದ್ದರು. ಅಡುಗೆ ಮಾಡುವ ಉದ್ದೇಶದಿಂದ ಕೋಚ್‌ನೊಳಗೆ ಅಕ್ರಮವಾಗಿ ಸಾಗಿಸಲಾಗಿದ್ದ ಗ್ಯಾಸ್ ಸಿಲಿಂಡರ್‌ನ ಸ್ಫೋಟದಿಂದಾಗಿ ಬೆಂಕಿ ಕಾಣಿಸಿಕೊಂಡಿದೆ ಎಂದು ಮೂಲಗಳು ತಿಳಿಸದೆ.

ಘಟನೆಯಲ್ಲಿ ಗಾಯಗೊಂಡ 20 ಜನರಲ್ಲಿ ನಾಲ್ವರ ಸ್ಥಿತಿ ಗಂಭೀರವಾಗಿದೆ ಎಂದು ಹೇಳಲಾಗಿದೆ.

ಮಧುರೈ ರೈಲು ನಿಲ್ದಾಣದಿಂದ 1 ಕಿಮೀ ದೂರದಲ್ಲಿ ರೈಲು ನಿಂತಿದ್ದು, ಪ್ರಯಾಣಿಕರು ಮೀನಾಕ್ಷಿ ದೇವಸ್ಥಾನಕ್ಕೆ ದರ್ಶನಕ್ಕಾಗಿ ತೆರಳುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ. ಅಗ್ನಿಶಾಮಕ ಮತ್ತು ರಕ್ಷಣಾ ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ರವಾನಿಸಲಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮಧುರೈ ಜಿಲ್ಲಾಧಿಕಾರಿ ಸಂಗೀತಾ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಬೆಂಕಿ ಉದ್ಭವಿಸಲು ಕಾರಣವಾದ ವಿಚಾರಗಳ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

## ನಿಧನ ವಾರ್ತೆ

# ನಾಗೇಶ ವಿ ಕಟ್ಟಿ



**ಗದಗ:** ಗದುಗಿನ ಬಣಜಿಗ ಸಮಾಜದ ಹಿರಿಯರು,ನಿವೃತ್ತ ಸಹಾಯಕ ಕೃಷಿ ನಿರ್ದೇಶಕರಾದ ನಾಗೇಶ ವೀರಭದ್ರಪ್ಪ ಕತ್ತಿಶೆಟ್ಟರ (ಕಟ್ಟಿ) ಸಾ॥ ಮುಳಗುಂದ (ಹಾಲಿ ವಸ್ತಿ ಗದಗ, ಆದರ್ಶನ ನಗರದ ಬಯಲು ಆಂಜನೇಯ ದೇವಸ್ಥಾನದ ಎದುರುಗಡೆ) ಇವರು 26-08-2023 ಶನಿವಾರ ಸಾಯಂಕಾಲ, ತಮ್ಮ 81 ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಪಾರ್ಥೀವ ಶರೀರದ ಅಂತಿಮ ಯಾತ್ರೆಯು ದಿನಾಂಕ 27-08-2023 ರವಿವಾರ ಮಧ್ಯಾಹ್ನ 12 ಗಂಟೆಗೆ ಸ್ವಗೃಹದಿಂದ ಹೊರಡುವುದು ನಂತರ ಅಂತ್ಯಕ್ರಿಯೆಯು ವೀರಶೈವ ರುದ್ರಭೂಮಿ ಗದಗನಲ್ಲಿ ಜರುಗುವುದು. ಮೃತರು ಪತ್ನಿ, ಪುತ್ರರು, ಪುತ್ರಿಯರು, ಸಹೋದರ, ಸಹೋದರಿಯರು, ಅಳಿಯಂದಿರು, ಸೊಸೆಯಂದಿರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಯಾರಿಗೆ ಎಷ್ಟು ಗೌರವ ಕೊಡಬೇಕು ಗೊತ್ತಿದೆ; ಡಿ.ಕೆ.ಶಿ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಯಾರಿಗೆ ಎಷ್ಟು ಗೌರವ ಕೊಡಬೇಕು ಎಂಬುದನ್ನು ಬಿಜೆಪಿಯಿಂದ ಕಲಿಯಬೇಕಿಲ್ಲ. ನಮಗೂ ಗೊತ್ತಿದೆ. ರಾಜಕೀಯ ಪ್ರಜ್ಞೆ, ಸಮಯ ಪ್ರಜ್ಞೆ ಎಲ್ಲವೂ ಇದೆ ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ತೀಕ್ಷ್ಣವಾಗಿ ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಅವರ ಬೆಂಗಳೂರು ಭೇಟಿ ವೇಳೆ ಸರ್ಕಾರ ಶಿಷ್ಟಾಚಾರ ಪಾಲನೆ ಮಾಡಿಲ್ಲ ಎಂಬ ಬಿಜೆಪಿ ನಾಯಕರ ಮಾತಿಗೆ ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿದ ಅವರು, "ಪ್ರಧಾನಮಂತ್ರಿ ಕಚೇರಿಯಿಂದ ನಮಗೆ ಕರೆ ಬಂದಿತ್ತು. ಪ್ರಧಾನಿಯವರ ಸ್ವಾಗತಕ್ಕೆ ಬರುವುದು ಬೇಡ ಎಂದು ಕೇಂದ್ರ ಸರ್ಕಾರವೇ ನಮಗೆ ಹೇಳಿತ್ತು. ಹಾಗಾಗಿ ಸರ್ಕಾರದ ವತಿಯಿಂದ ಪ್ರಧಾನಿ ಮೋದಿ ಅವರ ಸ್ವಾಗತ ಮಾಡಿಸಿದ್ದೇವೆ" ಎಂದರು.

"ಅಶೋಕ್ ಅವರಿಗೆ ಸ್ವಲ್ಪ ಸಮಸ್ಯೆ ಇದ್ದಂತಿದೆ. ಬೇಕಾಬಿಟ್ಟಿ ಮಾತನಾಡುತ್ತಾರೆ. ಬೇರೆ ರಾಜ್ಯಗಳ ರೀತಿ ಅಲ್ಲ ನಮ್ಮ ಸಂಸ್ಕೃತಿ. ರಾಜಕೀಯ ಭಿನ್ನಾಭಿಪ್ರಾಯ ಇದ್ದರೂ ಪ್ರಧಾನಿ ಅವರಿಗೆ ಗೌರವ ಕೊಡುತ್ತೇವೆ" ಎಂದರು.

ಅಥೆನ್ಸ್‌ನಿಂದ ಮೋದಿ ಬರುವ ಕಾರಣ ನಿಖರವಾಗಿ ಇಂತಿಷ್ಟೇ ಹೊತ್ತಿಗೆ ಬೆಂಗಳೂರಿಗೆ ತಲುಪಬಹುದು ಎಂಬ ಖಚಿತತೆ ಇರಲಿಲ್ಲ. ತಮ್ಮ ಸ್ವಾಗತಕ್ಕೆ ಮುಖ್ಯಮಂತ್ರಿ, ರಾಜ್ಯಪಾಲರು ಬಂದು ತಾಸುಗಟ್ಟಲೆ ಕಾಯುವುದು ಬೇಡ ಎಂಬ ಕಾರಣಕ್ಕೆ ಅಧಿಕಾರಿಗಳನ್ನಷ್ಟೇ ಕಳುಹಿಸಿದರೆ ಸಾಕು ಎಂದು ಮೋದಿ ಹೇಳಿದ್ದರು ಎನ್ನಲಾಗಿದೆ.

ಪ್ರಧಾನಿ ಕಚೇರಿಯಿಂದ ಬಂದ ಪತ್ರಪ್ರಧಾನಿ ಕಚೇರಿಯಿಂದ ಬಂದ ಪತ್ರ

ಅತ್ತ ಮೋದಿ ಕೂಡ ಹೆಚ್‌ಎಎಲ್ ಏರ್‌ಪೋರ್ಟ್ ಹೊರಭಾಗದಲ್ಲಿ ಜನರನ್ನು ಉದ್ದೇಶಿಸಿ ಮಾತನಾಡಿದ ವೇಳೆ, "ಪ್ರೋಟೋಕಾಲ್ ಪ್ರಕಾರ (ಶಿಷ್ಟಾಚಾರ) ಇಷ್ಟೊಂದು ಕಡಿಮೆ ಅವಧಿಯಲ್ಲಿ ವ್ಯವಸ್ಥೆ ಮಾಡಿದ ಕರ್ನಾಟಕದ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳಿಗೆ ಧನ್ಯವಾದಗಳು" ಎಂದು ಹೇಳಿದ್ದರು.

# ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ

■ ವಿಜಯಸಾಕ್ಷಿ ಸುದ್ದಿ, ಗದಗ



ನಗರದ ವಾರ್ಡ್ ನಂ.24ರಲ್ಲಿ ಬರುವ ಟಿಳಕ ಪಾರ್ಕ್ ಪಕ್ಕದ ರಸ್ತೆ ಕಾಮಗಾರಿಗೆ ವಾರ್ಡಿನ ನಗರಸಭೆ ಸದಸ್ಯ ನಾಗರಾಜ ಹುಲಿಗೆಪ್ಪ ತಳವಾರ ನೇತೃತ್ವದಲ್ಲಿ ಭೂಮಿ ಪೂಜೆ ನೇರವೆರಿತು. ಈ ಸಂಧರ್ಭದಲ್ಲಿ 24ನೇ ವಾರ್ಡಿನ ಹಿರಿಯರಾದ ಮುರುಘರಾಜೇಂದ್ರ ಕರೂಗಲ ಭೂಮಿ ಪೂಜೆಯನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ 28ನೇ ವಾರ್ಡಿನ ನಗರಸಭೆ ಸದಸ್ಯರಾದ ಅನಿಲ್ ಅಬ್ಬಿಗೇರಿ ಮಾತನಾಡಿ, ವಾರ್ಡಿನಲ್ಲಿ ಜನಪರ ಕೆಲಸವನ್ನು ಮಾಡುತ್ತಿರುವ ನಗರಸಭೆ ಸದಸ್ಯರ ಕಾರ್ಯವನ್ನು ಶ್ಲಾಘಿಸಿದರು. ಶ್ರೀಸಾಯಿ ಸೇವಾ ಸಮಿತಿ ಅಧ್ಯಕ್ಷ ಸಂತೋಷ ಕಬಾಡರ, ವಾರ್ಡಿನ ಪ್ರಮುಖರಾದ ಶಂಕರ ಮಲ್ಲಸಮುದ್ರ, ಪ್ರಸಾದ ಕೊಟ್ಟಗಿ, ಪ್ರಸಾದ ಅಬ್ಬಿಗೇರಿ, ಪ್ರವೀಣ ವಾರಕರ್, ಶಿವಾನಂದ ಹೂಗಾರ, ವಿಠ್ಠಲ ಭಾಂಡಗೆ, ಪ್ರಶಾಂತ ಖಾಟವಾ, ಏಕನಾಥ ಮಲ್ಲಸಮುದ್ರ, ರವಿ ಮಡಿವಾಳರ, ಪ್ರಕಾಶ ಗುಗ್ಗರಿ, ಬಾಬು ಸುಲಾಖೆ, ಅಶೋಕ ಮುಳಗುಂದ, ವಿಶ್ವನಾಥ ಟೆಂಗಿನಕಾಯಿ, ಭಾಂಡಗೆ ಮುಂತಾದವರು ಪಾಲ್ಗೊಂಡಿದ್ದರು.

# ನಮ್ಮ ಬದುಕಿಗೆ ಶರಣರ ವಚನ ಚಿಂತನೆಗಳು ಮಾರ್ಗದರ್ಶಿ



■ ವಿಜಯಸಾಕ್ಷಿ ಸುದ್ದಿ, ಗದಗ

ಮಾನವನಿಗೆ ಮಹತ್ವದ ಘಳಿಗೆಯನ್ನು ಸರಳ, ಸುಂದರ ಮತ್ತು ವಿರಳವಾಗಿ ತಿಳಿಸಿಕೊಟ್ಟ ಘನತೆ ಮತ್ತು ಗೌರವ ಬಸವಾದಿ ಶರಣರಿಗೆ ಸಲ್ಲುತ್ತದೆ. ಅಂದು ಶರಣ-ಶರಣೆಯರು ಬರೆದ ವಚನಗಳು ಇಂದು ಇಡೀ ಮಾನವನ ಬದು-ಕಿಗೆ ಮಾರ್ಗದರ್ಶಿಗಳಾಗಿವೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶರಣ ವಿವೇಕಾನಂದಗೌಡ ಪಾಟೀಲ ಹೇಳಿದರು.

ಅವರು ನಗರದ ಖಾನತೋಟದ ಮದ್ಲಿ ಓಣಿಯ ಶರಣ ಚಂದ್ರಶೇಖರ ವೀರಪ್ಪ ಪತ್ತಾರ ಇವರ ಮನೆಯಲ್ಲಿ ನಡೆದ ವಚನ ಶ್ರಾವಣದ 9ನೇ ದಿನದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ಅಶೋಕ ಬರಗುಂಡಿ ಹಾಗೂ ಪ್ರಕಾಶ್ ಅಸುಂಡಿ ಮಾತನಾಡಿದರು. ಸಭೆಯಲ್ಲಿ ಶೇಖಣ್ಣ ಕಳಸಾಪೂರಶೆಟ್ರು, ವಿ.ಕೆ ಕರಿಗೌಡ್ರು, ಸಿದ್ದಲಿಂಗಪ್ಪ ಹಂಚಿನಾಳ, ಸಿ.ಆರ್ ಗಡಾದ, ರೇಣುಕಾ ಕರಿಗೌಡ್ರು, ಸುಲೋಚನ ಹಂಚಿನಾಳ, ಗೌರಕ್ಕ ಬಡಿಗಣ್ಣವರ, ಸಹನಾ ಆಲತಗಿ, ಗಿರಿಜಾ ಹಿರೇಮಠ, ಪ್ರೇಮ ಪತ್ತಾರ, ಸಿದ್ಧಲಿಂಗೇಶ್ವರ ಪತ್ತಾರ, ಪಾರ್ವತಿ ಪತ್ತಾರ, ಎಂ.ಆರ್ ಜಿನಗಾ, ಸೋಮಶೇಖರ ಪುರಾಣಿಕ, ನಂದಕುಮಾರ್ ಈಳಗೇರ, ಚಂದ್ರಶೇಖರ ಪತ್ತಾರ, ಶಾಂತಮ್ಮ ಪತ್ತಾರ, ಅಶೋಕ ಬರಗುಂಡಿ, ಅನ್ನಪೂರ್ಣಕ್ಕ ಬರಗುಂಡಿ, ವಿಜಯಲಕ್ಷ್ಮೀ ಪತ್ತಾರ, ನಾಗಭೂಷಣ ಬಡಿಗಣ್ಣವರ, ವಿಶ್ವನಾಥ ಪತ್ತಾರ, ಮಾನ್ಯ ಪತ್ತಾರ, ಗಂಗಮ್ಮ ಹೂಗಾರ, ಪ್ರಕಾಶ್ ಅಸುಂಡಿ, ನಂದಿನಿ ಪತ್ತಾರ, ರಶ್ಮಿ ರೇವಣಕರ, ಶೀವಲಿಲಾ ಮದ್ಲಿ, ಅಭಿನವ, ರಾಹುಲ್ ರಾವಣಕಿ, ಗದಿಗೆಪ್ಪ ಚುಳಕಿ, ಶಂಕರಪ್ಪ ಸೋಮಗೊಂಡ, ಶ್ರೇಯಸ್, ಗೌರಮ್ಮ ಪತ್ತಾರ, ಪತ್ತಾರ ಕುಟುಂಬದವರು, ಸಾಹಿತ್ಯಾಭಿಮಾನಿಗಳು, ಬಸವಾಭಿಮಾನಿಗಳು ಪಾಲ್ಗೊಂಡಿದ್ದರು.

ಗಿರಿಜಾ ಹಿರೇಮಠ ವಚನಗೀತೆ ಹಾಡಿದರು. ಚಂದ್ರಶೇಖರ ಪತ್ತಾರ ಸ್ವಾಗತಿಸಿದರು. ರೇಣುಕಾ ಕರಿಗೌಡ್ರ ನಿರೂಪಿಸಿದರು. ಬಸವದಳದ ಶರಣೆಯರು ವಚನ ಮಂಗಲ ಹಾಡಿದರು.

### ಲಿಂ.ಗುರು ಅನ್ನದಾನ ಶ್ರೀಗಳವರ 46ನೇ ಪುಣ್ಯಸ್ಮರಣೋತ್ಸವ, ಬೆಳ್ಳಿ ರಥೋತ್ಸವ


# ಹಾಲಕೆರೆಯಲ್ಲಿ ಆ. 27, 28ರಂದು ವಿವಿಧ ಕಾರ್ಯಕ್ರಮಗಳು


■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಮೀಪದ ಹಾಲಕೆರೆ ಅನ್ನದಾನೇಶ್ವರ ಸಂಸ್ಥಾನ ಮಠದ ಲಿಂ. ಗುರು ಅನ್ನದಾನ ಮಹಾಸ್ವಾಮಿಗಳವರ 46ನೇ ಪುಣ್ಯ ಸ್ಮರಣೋತ್ಸವ, ಮಹಿಳೆಯರಿಂದ ಎಳೆಯಲ್ಪಡುವ ಬೆಳ್ಳಿ ರಥೋತ್ಸವ, ಹಿರಿಯ ತಾಯಂದಿರಿಗೆ ಸನ್ಮಾನ ಹಾಗೂ ಆಧ್ಯಾತ್ಮ ಪ್ರವಚನದ ಮಂಗಲೋತ್ಸವ ಕಾರ್ಯಕ್ರಮಗಳು ಆಗಸ್ಟ್ 27 ಹಾಗೂ 28ರಂದು ನಡೆಯಲಿವೆ.

ಆ.27ರ ರವಿವಾರ ಬೆಳಿಗ್ಗೆ 10 ಗಂಟೆಗೆ ಶಾಖಾ ಶಿವಯೋಗಮಂದಿರ ನಿಡಗುಂದಿಕೊಪ್ಪದ ಅಭಿನವ ಚನ್ನಬಸವ ಸ್ವಾಮೀಜಿ ಷಟಸ್ಥಲ ಧ್ವಜಾರೋಹಣವನ್ನು ನೆರವೇರಿಸುವರು. ಮಧ್ಯಾಹ್ನ 12 ಗಂಟೆಗೆ ಮಹಾಗಣಾರಾಧನೆ, ಸಂಜೆ 7 ಗಂಟೆಗೆ ಲಿಂ.ಗುರು ಅನ್ನದಾನ ಸ್ವಾಮೀಜಿಯವರ 46ನೇ ಪುಣ್ಯಸ್ಮರಣೋತ್ಸವ ಮತ್ತು ಆಧ್ಯಾತ್ಮ ಪ್ರವಚನ ಮಂಗಲೋತ್ಸವ ನಡೆಯಲಿದೆ.

ವಳಬಳ್ಳಾರಿಯ ಸುವರ್ಣಗಿರಿ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ನೇರಡಗಂಬದ ಪಶ್ಚಿಮಾದ್ರಿ ಸಂಸ್ಥಾನಮಠದ ಪಂಚಮ ಸಿದ್ದಲಿಂಗ ಸ್ವಾಮೀಜಿ





ಅಧ್ಯಕ್ಷತೆ ವಹಿಸುವರು. ಹಾಲಕೆರೆ ಅನ್ನದಾನೇಶ್ವರ ಸಂಸ್ಥಾನಮಠದ ಮುಪ್ಪಿನ ಬಸವಲಿಂಗ ಸ್ವಾಮೀಜಿ, ದರೂರು ಸಂಗನಬಸವೇಶ್ವರ ಮಠದ ಕೊಟ್ಟೂರು ಸ್ವಾಮೀಜಿ, ಗದಗ-ರಾಜೂರ ಹಿರೇಮಠದ ಅಭಿನವ ಪಂಚಾಕ್ಷರ ಸ್ವಾಮೀಜಿ, ಸೊರಟೂರು ಹಿರೇಮಠದ ಫಕ್ಕೀರೇಶ್ವರ ಶಿವಾಚಾರ್ಯ ಸ್ವಾಮೀಜಿ, ಹಳಿಂಗಳಿ ಕಮರಿಮಠದ ಶಿವಾನಂದ ದೇವರು, ಗದಗದ ಅಡವೀಂದ್ರಸ್ವಾಮಿಮಠದ ಮಹೇಶ್ವರ ಸ್ವಾಮೀಜಿ ಸಮ್ಮುಖವನ್ನು ವಹಿಸುವರು.

ರೋಣ ಶಾಸಕ ಜಿ.ಎಸ್ ಪಾಟೀಲ, ಮಾಜಿ ಸಚಿವ ಕಳಕಪ್ಪ ಬಂಡಿ, ವಿಧಾನ ಪರಿಷತ್ ಸದಸ್ಯ ಎಸ್.ವಿ ಸಂಕನೂರ, ಮಾಜಿ ಶಾಸಕ ಡಿ.ಆರ್ ಪಾಟೀಲ, ಸಿಂಧನೂರು ಶ್ರೀ ಅನ್ನದಾನೇಶ್ವರ ಆಸ್ಪತ್ರೆಯ ಡಾ. ಬಿ.ಎನ್ ಪಾಟೀಲ, ಬೆಂಗಳೂರಿನ ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್ ಆರ್.ಬಿ ಪಾಟೀಲ, ಕನಸಾವಿ ನಿವೃತ್ತ ಎಇಇ ಹನಮಂತಗೌಡ ಬೆಳ್ಳಿಗನೂರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಅಬ್ಬಿಗೇರಿಯ ವೇ.ಮೂ ಮಂಜುನಾಥ ಶಿವಪೂಜಿಮಠ ಪ್ರವಚನದ ಮಂಗಲನುಡಿ ಹಾಡಲಿದ್ದಾರೆ. ಹಾಲಕೆರೆಯ ದ್ಯಾಮಣ್ಣ ಮಾಸ್ತರ ಬಡಿಗೇರ ಹಾಗೂ ದೇವಪ್ಪ ಮಾಸ್ತರ ಬಳೂಟಗಿ ಅವರು ಸಂಗೀತ ಸೇವೆ ನೀಡಲಿದ್ದಾರೆ. ಕೋಡಿಕೊಪ್ಪದ ಕಳಕಮಲ್ಲಯ್ಯ ಅಣ್ಣಿಗೇರಿ ತಬಲಾ ಸಾಥ ನೀಡುವರು. ನರೇಗಲ್ಲ ಶ್ರೀ ಅ.ವಿ ಪ್ರೌಢಶಾಲೆಯ ಎಚ್.ಎಂ ರತ್ನಮ್ಮ ಹಾಗೂ ಅಬ್ಬಿಗೇರಿಯ ಶ್ರೀ ಅ.ವಿ ಪ್ರೌಢಶಾಲೆಯ ಐ. ಜ್ಞಾನೇಶ್ವರಿ ಸಭಾ ಸಂಚಾಲನೆ ನಿರ್ವಹಿಸುವರು.

ಆ. 28, ಸೋಮವಾರ ಬೆಳಿಗ್ಗೆ 11 ಗಂಟೆಗೆ 501 ಮುತ್ತೈದೆಯರಿಗೆ ಉಡಿ ತುಂಬುವ ಸಮಾರಂಭ ನಡೆಯಲಿದೆ. ಸಂಜೆ 5 ಗಂಟೆಗೆ ಸಕಲ ವಾದ್ಯವೈಭವಗಳೊಂದಿಗೆ ಮಹಿಳೆಯರಿಂದ ಎಳೆಯಲ್ಪಡುವ ಬೆಳ್ಳಿ ರಥೋತ್ಸವ ಜರುಗಲಿದೆ. ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಬೆಳ್ಳಿ ರಥೋತ್ಸವಕ್ಕೆ ಚಾಲನೆ ನೀಡಲಿದ್ದಾರೆ.

ಸಂಜೆ 6 ಗಂಟೆಗೆ ನಡೆಯುವ ಶಿವಾನುಭವ ಗೋಷ್ಠಿಯಲ್ಲಿ ಧಾರವಾಡದ ಮುರುಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು. ಮಣಕವಾಡದ ಅನ್ನದಾನೇಶ್ವರ ದೇವಮಂದಿರದ ಮಹಾಮಠದ ಅಭಿನವ ಮೃತ್ಯುಂಜಯ ಸ್ವಾಮೀಜಿ ನೇತೃತ್ವ ವಹಿಸುವರು. ಖೇಳಗಿ ಶಿವಲಿಂಗೇಶ್ವರ ಸಂಸ್ಥಾನ ಮಠದ ಶಿವಲಿಂಗ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು. ಗುಳೇದಗುಡ್ಡ ಮರಡಿಮಠದ ಅಭಿನವ ಕಾಡಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಸುಕ್ಷೇತ್ರ ಅಡವಿ ಅಮರೇಶ್ವರ ತೋಂಟದಾರ್ಯ ಸ್ವಾಮೀಜಿ, ಕುರುಗೋಡು-ನಾಗಲಾಪುರದ ನಿರಂಜನ ದೇವರು, ಸೋಮಸಮುದ್ರದ ಸಿದ್ದಲಿಂಗ ದೇವರು, ಶ್ರೀಧರಗಡ್ಡೆ ಮರಿಕೊಟ್ಟೂರು ದೇವರು, ಬೂದಗುಂಪದ ಸಿದ್ದೇಶ್ವರ ದೇವರು, ವ್ಯಾಕರನಾಳ ವಿಶ್ವೇಶ್ವರ ದೇವರು ಸಮ್ಮುಖವನ್ನು ವಹಿಸುವರು.

ಹಗರಿಬೊಮ್ಮನಹಳ್ಳಿಯ ಶಾಸಕಿ ಲತಾ ಮಲ್ಲಿಕಾರ್ಜುನ, ಗದಗ ಜಿಲ್ಲಾಧಿಕಾರಿ ವೈಶಾಲಿ ಎಮ್.ಎಲ್, ರೋಣ ಅಕ್ಕನ ಬಳಗದ ಅಧ್ಯಕ್ಷೆ ಅನ್ನಪೂರ್ಣ ಜಿ.ಪಾಟೀಲ, ಗಜೇಂದ್ರಗಡ ಮಹಿಳಾ ಮಂಡಳ ಅಧ್ಯಕ್ಷೆ ಸಂಯುಕ್ತ ಕೆ.ಬಂಡಿ, ಗದಗ ಜೆಎಂಎಫ್‌ಸಿ ನ್ಯಾಯಾಧೀಶೆ ಸುನೀತಾ ಶಿ.ಡೊಳ್ಳಿನ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ಹಾಲಕೆರೆ ಅನ್ನದಾನೇಶ್ವರ ಮಠದ ಪ್ರಕಟಣೆ ತಿಳಿಸಿದೆ.

ಹಾವೇರಿ ಜಿಲ್ಲೆಯ ಹನಮನಮಟ್ಟಿ ಕೃಷಿ ಮಹಾವಿದ್ಯಾಲಯದ ಪ್ರಾಧ್ಯಾಪಕಿ ಡಾ. ಪುಷ್ಪಾ ಶಲವಡಿಮಠ ಅವರು 'ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡುವರು. ಸಂಜೆ 7 ಗಂಟೆಗೆ ಹಾಲಕೆರೆಯ ಹಿರಿಯ ತಾಯಂದಿರಾದ ಮಣ್ಣಮ್ಮ ರೊಟ್ಟಿ, ಯಲ್ಲಮ್ಮ ಹುಲ್ಲಣ್ಣವರ, ದೇವಮ್ಮ ಪಾಟೀಲ, ಶಾರದಾ ತಲೇಖಾನ, ದೇವಮ್ಮ ಕುರಿ ಇವರಿಗೆ ಸನ್ಮಾನ ನಡೆಯಲಿದೆ. ನರೇಗಲ್ಲ ಶ್ರೀ ಬ.ಕ.ಹಿ. ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಬಿ.ಜಿ ಶಿರಸಿ ಹಾಗೂ ನರೇಗಲ್ಲ ಶ್ರೀ ಅ.ಪ ಕಾಲೇಜು ಸಹಾಯಕ ಪ್ರಾಧ್ಯಾಪಕಿ ಡಾ. ರತ್ನಾ ಪಾಟೀಲ ಸಭಾ ಸಂಚಾಲನೆ ನಿರ್ವಹಿಸುವರು. ಬಳಿಕ ಅನ್ನದಾನೇಶ್ವರ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಅಂಗಸಂಸ್ಥೆಗಳ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುವವು.

# ಶಾಲಾ ಮಕ್ಕಳಿಗೆ ಶೂ-ಸಾಕ್ಸ್ ವಿತರಣೆ

■ ವಿಜಯಸಾಕ್ಷಿ ಸುದ್ದಿ, ನರಗುಂದ

ತಾಲ್ಲೂಕಿನ ಚಿಕ್ಕನರಗುಂದ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಎಸ್‌ಡಿಎಂಸಿ ಅಧ್ಯಕ್ಷ ರುದ್ರಪ್ಪ ಕಲಹಾಳ ಶೂ ಹಾಗೂ ಸಾಕ್ಸ್ ವಿತರಿಸಿದರು. ನಂತರ ಮಾತನಾಡಿದ ಅವರು, ಇತರ ಶಾಲಾ ಮಕ್ಕಳಂತೆ ಕಲಿಯಲು ಪೂರಕವಾದ ಎಲ್ಲಾ ಸೌಲಭ್ಯಗಳನ್ನು ಸರ್ಕಾರ ಕಲ್ಪಿಸಿದೆ. ಸರ್ಕಾರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ, ಅಗತ್ಯ ಸಮವಸ್ತ್ರ, ಶೂ, ಬಿಸಿಯೂಟವನ್ನು ಒಳಗೊಂಡಂತೆ ಎಲ್ಲಾ ಸೌಕರ್ಯಗಳನ್ನು ಒದಗಿಸಲಾಗಿದ್ದು, ಇದರ ಪ್ರಯೋಜನವನ್ನು ಎಲ್ಲಾ ವಿದ್ಯಾರ್ಥಿಗಳು ಪಡೆದುಕೊಳ್ಳಬೇಕೆಂದರು.



ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಉಪಾಧ್ಯಕ್ಷ ಮುನ್ನಾಬಿ ನದಾಪ, ಸದಸ್ಯರಾದ ಸೋಮಲಿಂಗ ಗಾಣಿಗೇರ, ಮಂಜು ಯಾವಗಲ್, ಬಸವರಾಜ ನಾಡಗೌಡ್ರ, ಸುರೇಶ ಲಕ್ಕನ್ನವರ, ದರಿಯಪ್ಪ ಹಾದಿಮನಿ, ಮುಖ್ಯ ಶಿಕ್ಷಕ ಸುರೇಶ ಭಜಂತ್ರಿ ಹಾಗೂ ಶಿಕ್ಷಕ ವೃಂದದವರು ಹಾಜರಿದ್ದರು.

# ಇನ್ನರ್‌ವ್ಹೀಲ್ ಕ್ಲಬ್‌ನಿಂದ 'ಜಾಗೃತಿ ಜಾಥಾ' ಬೈಕ್ ರ‍್ಯಾಲಿ



■ ವಿಜಯಸಾಕ್ಷಿ ಸುದ್ದಿ, ಗದಗ

ಇನ್ನರ್‌ವ್ಹೀಲ್ ಕ್ಲಬ್ ಗದಗ-ಬೆಟಗೇರಿ, ಕಾರ್ಮಿಕ ಇಲಾಖೆ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಷನ್ ಇವರ ಸಹಯೋಗದಲ್ಲಿ 'ಜಾಗೃತಿ ಜಾಥಾ' ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಗಿತ್ತು

ಮಹಿಳಾ ಬೈಕ್ ರ‍್ಯಾಲಿಗೆ ಇನ್ನರ್ ವ್ಹೀಲ್ ಕ್ಲಬ್-317ರ ಡಿಸ್ಟ್ರಿಕ್ಟ್ ಚೇರಮನ್ ವೈಶಾಲಿ ಲೋಖಂಡೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಈ ವರ್ಷದ ನಮ್ಮ ಕ್ಲಬ್‌ನ ಥೀಮ್ 'ಶೈನ್ ಎ ಲೈಟ್' ಆಗಿದ್ದು, ಮಹಿಳೆಯರಲ್ಲಿ ಬೌದ್ಧಿಕ, ಆರ್ಥಿಕ, ಮಾನಸಿಕ ಬಲವನ್ನು ಹೆಚ್ಚಿಸಿ ಅವರನ್ನು ಸ್ವಾವಲಂಬಿಯಾಗುವಂತೆ ಮಾಡಬೇಕು. ಮಹಿಳೆಯರ ಮೇಲೆ ಕೌಟುಂಬಿಕ ಹಿಂಸೆಗಳು, ದೌರ್ಜನ್ಯಗಳು ಹೆಚ್ಚುತ್ತಿವೆ. ಅವುಗಳನ್ನು ತಡೆಯುವ ನಿಟ್ಟಿನಲ್ಲಿ ಕಾರ್ಯ ಕೈಗೊಳ್ಳಬೇಕು. ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಯಾಗಬೇಕು. ಮಕ್ಕಳು ಮರಳಿ ಶಾಲೆಯತ್ತ ಸಾಗುವಂತೆ ಮಾಡಬೇಕು. ತಾಯಿಯೇ ಮೊದಲ ಗುರುವಾಗಿರುವದರಿಂದ ಮಕ್ಕಳಲ್ಲಿ ವೈಜ್ಞಾನಿಕತೆಯ ಮನೋಬಾವ ಮೂಡಿಸಬೇಕು ಎಂದರು.

ಈ ಸಂದರ್ಭದಲ್ಲಿ ಇಚಲಕರಂಜಿಯ ಇನ್ನರ್ ವ್ಹೀಲ್ ಕ್ಲಬ್ ಮಾಜಿ ಅಧ್ಯಕ್ಷೆ ಪಲ್ಲವಿ, ಮಾಜಿ ಡಿಸ್ಟ್ರಿಕ್ಟ್ ಚೇರಮನ್ ಪ್ರೇಮಾ ಗುಳಗೌಡರ, ಇನ್ನರ್ ವ್ಹೀಲ್ ಕ್ಲಬ್ ಅಧ್ಯಕ್ಷೆ ರಜನಿ ಪಾಟೀಲ, ಕಾರ್ಯದರ್ಶಿ ಹೇಮಾ ಪೊಂಗಲಿಯಾ, ಮೀನಾಕ್ಷಿ ಸಜ್ಜನರ, ಶ್ರೇಯಾ ಪವಾಡಶೆಟ್ಟರ, ಸುವರ್ಣ ವಸ್ತ್ರದ ಮೊದಲಾದವರು ಉಪಸ್ಥಿತರಿದ್ದರು.

ರ‍್ಯಾಲಿಯಲ್ಲಿ ಭಿತ್ತಿಪತ್ರಗಳನ್ನು ಹಿಡದು ಜಾಗೃತಿ ಮೂಡಿಸಲಾಯಿತು. ರ‍್ಯಾಲಿಯಲ್ಲಿ ಶಿವಲೀಲಾ ಅಕ್ಕಿ, ವಿದ್ಯಾ ಗಂಜಿಹಾಳ, ರೇಣುಕಾ ಅಮಾತ್ಯ, ಶಿಲ್ಪಾ ಅಕ್ಕಿ, ಅಶ್ವಿನಿ ಜಗತಾಪ, ಜ್ಯೋತಿ ಭರಮಗೌಡರ, ಪುಷ್ಪಾ ಭಂಡಾರಿ, ವೀಣಾ ತಿರ್ಲಾಪೂರ, ಸಾಗರಿಕಾ ಅಕ್ಕಿ, ಉಮಾ ಮುನವಳ್ಳಿ, ಲಲಿತಾ ಉಮನಾಬಾದಿ, ಮಂಜುಳಾ ಅಕ್ಕಿ, ಪ್ರತಿಭಾ ಭದ್ರಶೆಟ್ಟಿ ಮುಂತಾದವರು ಪಾಲ್ಗೊಂಡಿದ್ದರು. ಇನ್ನರ್ ವ್ಹೀಲ್ ಕ್ಲಬ್ ಗದಗ-ಬೆಟಗೇರಿ ಸದಸ್ಯರು, ಕಾರ್ಮಿಕ ಇಲಾಖೆ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಷನ್ ಸಂಸ್ಥೆಯ ಸದಸ್ಯರು ಪಾಲ್ಗೊಂಡಿದ್ದರು.

# ಚಂದ್ರಯಾನ-3 ತಂಡದಲ್ಲಿ ಅಭಿಷೇಕ ದೇಶಪಾಂಡೆ

■ ವಿಜಯಸಾಕ್ಷಿ ಸುದ್ದಿ, ಗದಗ

ಇಸ್ರೋ ಸಂಸ್ಥೆಯಲ್ಲಿ ತ್ರಿವಿಕ್ರಮ ಸಾಧನೆಗೈದಿರುವ ವಿಜ್ಞಾನಿಗಳ ತಂಡದಲ್ಲಿ ನಮ್ಮ ಗದುಗಿನ ಮನೆ ಅಳಿಯ, ಮನೆಯ ಮಗನಂತಿರುವ ಅಭಿಷೇಕ ಅರವಿಂದ ದೇಶಪಾಂಡೆ ಕೂಡ ಕಾರ್ಯನಿರ್ವಹಿಸಿರುವುದು ಜಿಲ್ಲೆಯ ಜನತೆಯಲ್ಲಿ ಸಂತಸ ಇಮ್ಮಡಿಗೊಳಿಸಿದೆ.

ಗದಗ-ಬೆಟಗೇರಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿರುವ ಉದಯಕುಮಾರ ಚಾಟೆ ಮತ್ತು ಆರತಿ ಚಾಟೆ ಅವರ ಸುಪುತ್ರಿ ಅಪೂರ್ವ ಚಾಟೆ ಅವರನ್ನು ಕಳೆದ ವರ್ಷ ಅಭಿಷೇಕ ಅವರು ವಿವಾಹವಾಗಿದ್ದಾರೆ. ಅರವಿಂದ ದೇಶಪಾಂಡೆಯವರು ಇಸ್ರೋದ ಸಂವಹನ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದು, ಈ ಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಮನೆ ಅಳಿಯಂದಿರ ಸಾಧನೆಯನ್ನು ಕಂಡು ಚಾಟೆ ದಂಪತಿಗಳ ಖುಷಿಯು ಇನ್ನಷ್ಟು ಹೆಚ್ಚಿದೆ. ಮುಂಬರುವ ಆದಿತ್ಯಯಾನದಲ್ಲಿಯೂ ಅರವಿಂದ ದೇಶಪಾಂಡೆಯವರು ಪಾಲ್ಗೊಂಡು ದೇಶ ಸೇವೆಗೈಯಲಿ ಎಂದು ಹಾರೈಸಿದ್ದಾರೆ.




# ಸಮಿತಿಯ ಮುಖಂಡರು ಸಂಘಟನೆಯನ್ನು ಬಲಿಷ್ಠಗೊಳಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರದಲ್ಲಿ ಸ್ಲಂ ಸಮಿತಿಯಿಂದ ಹಮ್ಮಿಕೊಂಡ ಹೋರಾಟಗಳಲ್ಲಿ ನಗರದ ಸ್ಲಂ ಜನರು ಸಕ್ರಿಯವಾಗಿ ಭಾಗವಹಿಸುತ್ತಿರುವ ಪರಿಣಾಮವಾಗಿ, ಇಂದು ಅನೇಕ ಪ್ರದೇಶಗಳಲ್ಲಿ ವಸತಿ, ಹಕ್ಕುಪತ್ರ ಮತ್ತು ನಾಗರಿಕ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ ಎಂದು ಸ್ಲಂ ಜನಾಂದೋಲನ ಕರ್ನಾಟಕ ರಾಜ್ಯ ಸಂಚಾಲಕ ಹಾಗೂ ಗದಗ ಜಿಲ್ಲಾ ಸ್ಲಂ ಸಮಿತಿ ಜಿಲ್ಲಾಧ್ಯಕ್ಷ ಇಮ್ತಿಯಾಜ ಆರ್. ಮಾನ್ವಿ ಹೇಳಿದರು.

ಅವರು ನಗರದ ಕಳಸಾಪೂರ ರಸ್ತೆಯಲ್ಲಿರುವ ಆಕಾಶನಗರ ಸ್ಲಂ ಶಾಖೆ ಸಮಿತಿಯ ನಾಮಫಲಕವನ್ನು ಉದ್ಘಾಟಿಸಿ ಮಾತನಾಡಿ, ಸ್ಲಂ ಜನರ ಬೇಡಿಕೆಗಳ ಅನುಗುಣವಾಗಿ ಸಂಘಟನೆಯಿಂದ ಹೋರಾಟಗಳನ್ನು ನಡೆಸಲಾಗುತ್ತಿದೆ.

ಸ್ಥಳೀಯ ಸಮಸ್ಯೆಗಳನ್ನು ಸರಿಪಡಿಸಲು ಹಾಗೂ ಸಂಘಟಿತರಾಗಿ ಹೋರಾಡಲು ಗದಗ-ಬೆಟಗೇರಿ ನಗರದ ಅನೇಕ ಸ್ಲಂ ಪ್ರದೇಶಗಳಲ್ಲಿ ಸಂಘಟನೆಯ ಶಾಖಾ ಸಮಿತಿಗಳನ್ನು ರಚಿಸುವ ಮೂಲಕ ಸ್ಥಳೀಯ ಪ್ರದೇಶದ ಜನರ ಸಮಸ್ಯೆಗಳಿಗೆ ಸ್ಪಂದಿಸಲಾಗುತ್ತಿದೆ. ಆದ್ದರಿಂದ ನಮ್ಮ ಸಮಿತಿಯ ಮುಖಂಡರು ಸ್ಲಂ ಜನರ ಸಮಸ್ಯೆಗಳ ಸರಿಪಡಿಸುವ ನಿಟ್ಟಿನಲ್ಲಿ ಸಂಘಟನೆಯನ್ನು ಬಲಿಷ್ಠಗೊಳಿಸಬೇಕೆಂದು ಹೇಳಿದರು.



ಸ್ಲಂ ಸಮಿತಿಯ ಉಪಾಧ್ಯಕ್ಷ ರವಿಕುಮಾರ ಬೆಳಮಕರ, ಕಾರ್ಯದರ್ಶಿ ಅಶೋಕ ಕುಸಬಿ, ಶಾಖಾ ಸಮಿತಿಯ ಅಧ್ಯಕ್ಷ ಮಂಜುನಾಥ ಶ್ರೀಗಿರಿ, ಕಾರ್ಯದರ್ಶಿ ಶಿವಾನಂದ ಶಿಗ್ಲಿ, ಖಾನತೋಟ ಜನತಾ ಕಾಲೋನಿ ಸಮಿತಿ ಅಧ್ಯಕ್ಷ ಮೌಲಾಸಾಬ ಗಚ್ಚಿ, ಖಾಜೇಸಾಬ ಬಳ್ಳಾರಿ, ಮೌಲಾಸಾಬ ನದಾಫ, ಮಂಜುನಾಥ ಪಾಟೀಲ, ಮಲ್ಲೇಶ ಕಿಡಿಯಣ್ಣವರ, ಅಬ್ಬು ಬೆಟಗೇರಿ, ಅರ್ಜುನ ನವಲಗುಂದ, ಚಮನಸಾಬ ನದಾಫ, ದೇವಪ್ಪ ಲಕ್ಕುಂಡಿ ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

# ಮೂರ್ತಿ ಪ್ರತಿಷ್ಠಾಪನೆ ಆ.28ಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಸಮಿಪದ ತಿಮ್ಮಾಪೂರ ಗ್ರಾಮದ ಶ್ರೀ ಚೌಕಿಬಸವೇಶ್ವರ ದೇವಸ್ಥಾನದಲ್ಲಿ ಶ್ರೀ ಈಶ್ವರ ಮೂರ್ತಿ ಹಾಗೂ ಶ್ರೀ ಗಣೇಶ ಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಪ್ರವಚನ ಕಾರ್ಯಕ್ರಮ ಆ.28ರಂದು ಜರುಗಲಿದೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ಮುಂಜಾನೆ 5.30ಕ್ಕೆ ಮೂರ್ತಿ ಪ್ರತಿಷ್ಠಾಪನೆ, ಪಂಚಾಮೃತ ಅಭಿಷೇಕ, ರುದ್ರಾಭಿಷೇಕ ಮತ್ತು ಹೋಮ-ಹವನಗಳು ನಡೆಯಲಿವೆ. ಕಾರ್ಯಕ್ರಮದಲ್ಲಿ ಕೊಪ್ಪಳ ಗವಿಮಠದ ಶ್ರೀ ಗವಿಸಿದ್ದೇಶ್ವರ ಸ್ವಾಮೀಜಿ, ಗದುಗಿನ ಪಂಚಾಕ್ಷರಿ ಗವಾಯಿಗಳ ಆಶ್ರಮದ ಶ್ರೀ ಕಲ್ಲಯ್ಯಜ್ಜ ಸ್ವಾಮೀಜಿ, ಹರ್ಲಾಪೂರ ಗ್ರಾಮದ ಶ್ರೀ ಕೋಟುರೇಶ್ವರ ಸ್ವಾಮೀಜಿ, ಮೈನಹಳ್ಳಿ ಗ್ರಾಮದ ಸಿದ್ದೇಶ್ವರ ಸ್ವಾಮೀಜಿ, ಕೊಪ್ಪಳ ಕೆಂಡದ ಸ್ವಾಮೀಜಿ, ಕಲ್ಲೂರು ಗ್ರಾಮದ ವೀರಯ್ಯ ಹಿರೇಮಠ ಸ್ವಾಮೀಜಿ ಉಪಸ್ಥಿತರಿರುವರು.

ಭಕ್ತಾದಿಗಳು ಕಾರ್ಯಕ್ರಮಕ್ಕೆ





ಆಗಮಿಸಿ ದೇವರ ದರ್ಶನ ಪಡೆದು, ಪ್ರಸಾದ ಸ್ವೀಕರಿಸಿ, ದೇವರ ಕೃಪೆಗೆ ಪಾತ್ರರಾಗಬೇಕು ಎಂದು ಚೌಕಿ ಬಸವೇಶ್ವರ ಟ್ರಸ್ಟ್ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ಶೀಘ್ರ ಆರಂಭವಾಗಲಿ: ಮಾಜಿ ಸಿಎಂ ಶೆಟ್ಟರ್

■ ವಿಜಯಸಾಕ್ಷಿ ಸುದ್ದಿ, ಉಡುಪಿ

ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗವನ್ನು ವಿಳಂಬ ಮಾಡದೆ ಶೀಘ್ರವೇ ಅನುಷ್ಠಾನಗೊಳಿಸಬೇಕು ಮತ್ತು ನೈಋತ್ಯ ರೈಲ್ವೆ ವಿಭಾಗದ ಅಧಿಕಾರಿಗಳು ಅದರ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು ಎಂದು ಮಾಜಿ ಸಿಎಂ ಜಗದೀಶ ಶೆಟ್ಟರ್ ಅವರು ಹೇಳಿದ್ದಾರೆ.

ಜಯಶ್ರೀ ಕೃಷ್ಣ ಪರಿಸರ ಪ್ರೇಮಿ ಸಮಿತಿ(ಎನ್‌ಜಿಒ) ಶನಿವಾರ ಮಣಿಪಾಲದಲ್ಲಿ ಆಯೋಜಿಸಿದ್ದ 'ಕರಾವಳಿ ಕರ್ನಾಟಕದಲ್ಲಿ ಸುಸ್ಥಿರ ಕೈಗಾರಿಕಾ ಅಭಿವೃದ್ಧಿ ಮತ್ತು ಪ್ರವಾಸೋದ್ಯಮ ಉತ್ತೇಜನ' ಎಂಬ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಾಜಿ ಸಿಎಂ, ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ಸಾಕಾರಗೊಂಡರೆ ಕಾರವಾರದಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಉತ್ತೇಜನ ದೊರೆಯಲಿದೆ ಎಂದರು.

ಏತನ್ಮಧ್ಯೆ, ಬೇಲೆಕೇರಿ ಬಂದರನ್ನು ಸಹ ಅಭಿವೃದ್ಧಿಪಡಿಸಬೇಕು. ಇದರಿಂದ ಉತ್ತರ ಕರ್ನಾಟಕ ಭಾಗದ ಉದ್ಯಮಿಗಳು ಮುಂಬೈ ಮತ್ತು ಗೋವಾ ಬಂದರುಗಳನ್ನು ಅವಲಂಬಿಸುವ ಬದಲು ಬೇಲೆಕೇರಿ ಬಂದರಿನ ಮೂಲಕ ತಮ್ಮ ಸರಕುಗಳನ್ನು ರಫ್ತು ಮಾಡಬಹುದು.



ಉತ್ತರ ಕರ್ನಾಟಕದ ಉದ್ಯಮಿಗಳಿಗೆ ಇದು ಹೆಚ್ಚು ಲಾಭದಾಯಕ ಉದ್ಯಮವಾಗಲಿದೆ ಎಂದರು.

ಶೆಟ್ಟರ್ ಮಾತನಾಡಿ, ಅರಣ್ಯ ಭೂಮಿ ಇದೆ, ಪರಿಸರಕ್ಕೆ ಹಾನಿಯಾಗುತ್ತದೆ ಎಂಬ ಕಾರಣಕ್ಕೆ ಪರಿಸರವಾದಿಗಳು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು(ಪಿಐಎಲ್) ದಾಖಲಿಸಿ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ಯೋಜನೆ ನಿಲ್ಲಿಸಲು ಯತ್ನಿಸಿದರು. ಆದರೆ ರೈಲ್ವೆ ಮಾರ್ಗ ಹೆಚ್ಚು ಹಾನಿಯನ್ನುಂಟುಮಾಡುವುದಿಲ್ಲ. ಬದಲಿಗೆ ಅಭಿವೃದ್ಧಿಗೆ ಒತ್ತು ನೀಡುತ್ತದೆ. ಪರಿಸರವಾದಿಗಳ ಹೋರಾಟಗಳು ಒಂದು ಪ್ರದೇಶದ ಅಭಿವೃದ್ಧಿಗೆ ಧಕ್ಕೆಯಾಗಬಾರದು ಎಂದು ಅವರು ಹೇಳಿದರು.

ಉದ್ದೇಶಿತ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗಕ್ಕೆ 2002ರಲ್ಲಿ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಭೂಮಿಪೂಜೆ ನೆರವೇರಿಸಿದ್ದರು. ಆದರೆ ಪರಿಸರವಾದಿಗಳು ಹೈಕೋರ್ಟ್‌ನಲ್ಲಿ ಪಿಐಎಲ್‌ಗಳಿಂದಾಗಿ ಯೋಜನೆ ವಿಳಂಬವಾಯಿತು ಎಂದಿದ್ದಾರೆ.

### ಸಾಪ್ತಾಹಿಕ ವಚನ ಶ್ರಾವಣ-2023 ಪ್ರಾರಂಭೋತ್ಸವದಲ್ಲಿ ಡಾ. ಉಮೇಶ ಪುರದ

# ಅಂತರಂಗ ಶುದ್ಧಿಯಾದರೆ ಬಹಿರಂಗ ಶುದ್ಧಿ ಬೇಕಿಲ್ಲ

■ ವಿಜಯಸಾಕ್ಷಿ ಸುದ್ದಿ, ಗದಗ

ಪ್ರಸ್ತುತ ದಿನಮಾನದಲ್ಲಿ ನಾವು ನಮ್ಮ ಬಾಹ್ಯಾಂಗಗಳ ಅಲಂಕಾರ, ಶುಚಿತ್ವ, ಶುದ್ಧತೆಗಳಿಗೆ ಹೆಚ್ಚಿನ ಮಹತ್ವ ಕೊಡುತ್ತೇವೆ. ಆದರೆ, ಆಂತರಿಕವಾಗಿರುವ ನಮ್ಮ ಮನ, ಬುದ್ಧಿ, ಭಾವಗಳ ಪರಿಶುದ್ಧತೆಗೆ ಹೆಚ್ಚಿನ ಗಮನ ಕೊಡಲು ಹಿಂಜರಿಯುತ್ತೇವೆ. ಇದರಿಂದ ನಮ್ಮ ಬದುಕು ದುಃಖದಿಂದ ಕೂಡಿದೆ. ಬಾಹ್ಯ ಶುದ್ಧಿಗಾಗಿ ನಮಗೆ ಸಾಕಷ್ಟು ಸಾಮಗ್ರಿಗಳು ದೊರೆಯುತ್ತವೆ. ಆದರೆ ನಾವು ಅಂತರಂಗ ಶುದ್ಧಿಗಾಗಿ 12ನೇ ಶತಮಾನದಲ್ಲಿ ತಿಳಿಸಿದ ಶಿವಶರಣರ ವಚನಗಳನ್ನು ಅರಿತು ಆಚರಿಸಬೇಕು. ಈ ನಿಟ್ಟಿನಲ್ಲಿ ಅಂತರಂಗ ಶುದ್ಧಿಯಾದರೆ ಬಹಿರಂಗ ಶುದ್ಧಿಯ ಅಗತ್ಯತೆಯಿಲ್ಲ ಎಂದು ಡಿಜಿಎಂ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ನಿವೃತ್ತ ಪ್ರಾಚಾರ್ಯ ಡಾ. ಉಮೇಶ ಪುರದ ಅಭಿಪ್ರಾಯಪಟ್ಟರು.



ಎಸ್‌ವ್ಯಾಯ್‌ಬಿಎಂಎಸ್ ಯೋಗಪಾಠಶಾಲೆಯ ಬಸವ ಯೋಗ ಕೇಂದ್ರ ಮತ್ತು ಸಿದ್ಧಲಿಂಗ ನಗರದ ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರಗಳ ಸಹಯೋಗದಲ್ಲಿ ಶ್ರಾವಣ ಮಾಸದ 'ಸಾಪ್ತಾಹಿಕ ವಚನ ಶ್ರಾವಣ' ಕಾರ್ಯಕ್ರಮದ ಪ್ರಾರಂಭೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ನಿವೃತ್ತ ಶಿಕ್ಷಕ, ಬಸವ ತತ್ವಾಭಿಮಾನಿ ಜಿ.ಪಿ ಕಟ್ಟಿಮನಿ, ಕನ್ನಡದ ಮೊದಲ ಕವಯಿತ್ರಿ ಶಿವಶರಣೆ ಅಕ್ಕಮಹಾದೇವಿಯವರ ವಚನ ವಿಶ್ಲೇಷಣೆ ಮಾಡಿ, ನಮ್ಮ ಕಾಯಕ್ಕಿಂತ ನಮ್ಮ ಕಾಯಕ, ಆಚಾರ-ವಿಚಾರ, ನುಡಿಗಳು ಶುದ್ಧವಾಗಿರಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿವೃತ್ತ ಇಂಜಿನಿಯರ್ ವಾಸನಗೌಡ ಪಾಟೀಲ ವಹಿಸಿದ್ದರು. ವೇದಿಕೆಯಲ್ಲಿ ನಿವೃತ್ತ ಕೃಷಿ ವಿಜ್ಞಾನಿ ಡಾ. ಎಸ್.ಕೆ ನಾಲತ್ವಾಡಮಠ, ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರದ ಅಧ್ಯಕ್ಷೆ ಜಯಶ್ರೀ ವಸ್ತ್ರದ, ವಚನ ಸಂಗೀತಗಾರ್ತಿ ಸುನಂದಾ ಜ್ಯಾನೋಪಂತರ, ಸಾಮಾಜಿಕ ಕಾರ್ಯಕರ್ತೆ ಗಿರಿಜಾ ನಾಲತ್ವಾಡಮಠ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಎಂ.ಆರ್ ಬಸವರಡ್ಡಿ, ಎಸ್.ಬಿ ಗೌಡರ, ಎಸ್.ಬಿ ಆನೆಹೊಸೂರ, ಆನಂದ ಬದಿ, ಬಸವರಾಜ ತೊಟಿಗಿಡ, ಬಸವರಾಜ ಗಣಪ್ಪನವರ, ಶಾಂತಾ ಮುಂದಿನಮನಿ, ಪಾರ್ವತಿ ಭೂಮಾ, ಲಲಿತಾ ಅಣ್ಣಿಗೇರಿ, ಶಾರದಾ ಪಾಟೀಲ, ಅರುಣಾ ಇಂಗಳಳ್ಳಿ, ಗೌರಿ ಜೀರಂಕಳಿ, ಸಂಗೀತಾ ನಾಕೋಡ, ಕುಸುಮಾ ಕದಂ, ಗಿರಿಜಾ ಅಂಗಡಿ, ಶಾಂತಾ ಕುಂದಗೋಳ ಮುಂತಾದವರು ಪಾಲ್ಗೊಂಡಿದ್ದರು.

ಸುಲೋಚನಾ ಐಹೊಳ್ಳಿ ಸಾಮೂಹಿಕವಾಗಿ ಬಸವ ಪ್ರಾರ್ಥನೆ ಹಾಡಿದರು. ಡಾ. ಎಂ.ವಿ ಐಹೊಳ್ಳಿ ಸ್ವಾಗತಿಸಿದರೆ, ಸುನಂದಾ ಜ್ಯಾನೋಪಂತರ ವಚನ ಸಂಗೀತ ಸೇವೆ ಸಲ್ಲಿಸಿದರು. ಗಿರಿಜಾ ನಾಲ್ವಾಡಮಠ ದಾಸೋಹ ಸೇವೆ ಸಮರ್ಪಿಸಿದರು. ವಿ.ಎಂ ಮುಂದಿನಮನಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು

ಶ್ರಾವಣ ಮಾಸದ ಪ್ರಯುಕ್ತ ಪ್ರತಿ ಶ್ರಾವಣ ಸೋಮವಾರ ಸಾಯಂಕಾಲ 5.30 ಗಂಟೆಗೆ ಸಿದ್ಧಲಿಂಗ ನಗರದಲ್ಲಿನ ಬಸವ ಯೋಗ ಮಂದಿರದಲ್ಲಿ ನಡೆಯುವ ಸಾಪ್ತಾಹಿಕ ವಚನ ಶ್ರಾವಣ ಕಾರ್ಯಕ್ರಮದಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂದು ಸಾಪ್ತಾಹಿಕ ವಚನ ಶ್ರಾವಣ ಸೇವಾ ಸಮಿತಿ-2023ರ ಅಧ್ಯಕ್ಷ ವಿ.ಎಚ್ ಪಾಟೀಲ ವಿನಂತಿಸಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka